ಸಂಪುಟ: 22, ಸಂಚಿಕೆ: 22, ಪುಟಗಳು: 8, ಗುರುವಾರ, 31 ಅಕ್ಟೋಬರ್ 2024 RNI NO. KARKAN/2002/08054
epaper: www.sanjemugilu.com




ಸುದ್ದಿಗಳ ಹೊನಲು
# ಸಂಜೆ ಮುಗಿಲು
ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ
₹3

ನಾಡಿನ ಜನತೆಗೆ ಬೆಳಕಿನ ಹಬ್ಬ ದೀಪಾವಳಿಯ ಶುಭಾಷಯಗಳು...




**ಸುಭಾಷಿತ**

ಸಂತೋಷ ಲಭ್ಯವಿದೆ. ದಯಮಾಡಿ ಸ್ವಸಹಾಯ ಪದ್ಧತಿಯ ಮೂಲಕ ಪಡೆದುಕೊಳ್ಳಿ.
। ನಾಟ್ ಹಾನ್

### ಪಂಚಾಂಗ

(ಗುರುವಾರ 31, ಅಕ್ಟೋಬರ್-2024)
- ಶ್ರೀ ಕ್ರೋಧಿನಾಮ ಸಂವತ್ಸರ,
- ದಕ್ಷಿಣಾಯಣ, ಶರದೃತು,
- ಆಶ್ವಯುಜ ಮಾಸ, ಕೃಷ್ಣ ಪಕ್ಷ,
- ಚತುರ್ದಶಿ / ಅಮಾವಾಸ್ಯೆ,
- ಗುರುವಾರ, ಚಿತ್ತ ನಕ್ಷತ್ರ.
- ರಾಹುಕಾಲ - 01:34 ರಿಂದ 03:02
- ಗುಳಿಕಕಾಲ - 09:11 ರಿಂದ 10:39
- ಯಮಗಂಡಕಾಲ - 06:16 ರಿಂದ 07:43

## ಸಂಕ್ಷಿಪ್ತ ಸುದ್ದಿ

### ಹಾಸನಾಂಬೆ ದರ್ಶನಕ್ಕೆ ಬಂದ ಭಕ್ತಸಾಗರ



**ಹಾಸನ:** ಹಾಸನಾಂಬೆ ದೇವಿ ದರ್ಶನಕ್ಕೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಂದಿರುವ ಕಾರಣ ದೇವಿ ದರ್ಶನ ವಿಳಂಬವಾಗುತ್ತಿದೆ. ಮುಂಜಾನೆ ಎರಡು ಗಂಟೆಗೂ ಹೆಚ್ಚು ಕಾಲ ನೈವೇದ್ಯಕ್ಕಾಗಿ ಗರ್ಭಗುಡಿ ಬಾಗಿಲು ಮುಚ್ಚಿದ್ದರಿಂದ ದೇವಿ ದರ್ಶನ ಇನ್ನೂ ವಿಳಂಬವಾಗಿ ಆರಂಭವಾಗಿದೆ. ಇದರ ನಡುವೆ ಇಡೀ ರಾತ್ರಿ ಧಾರಾಕಾರ ಮಳೆ ಸುರಿದಿದ್ದು, ಮಳೆಯಲ್ಲಿಯೇ ಭಕ್ತರು ನಿಂತಿದ್ದರು. ಮಳೆಯನ್ನೂ ಲೆಕ್ಕಿಸದೆ ಸಾವಿರಾರು ಭಕ್ತರು ದೇವಿಯ ದರ್ಶನ ಪಡೆಯುತ್ತಿದ್ದಾರೆ. ದರ್ಶನದ ಎಲ್ಲಾ ಸಾಲುಗಳು ಭರ್ತಿಯಾಗಿವೆ. 1000, 300, ಧರ್ಮ ದರ್ಶನದ ಸಾಲುಗಳು ಸಂಪೂರ್ಣ ಭರ್ತಿಯಾಗಿವೆ. ಪುಟ 2

» **ತುಂಬಿ ತುಳುಕುತ್ತಿರುವ ಸರತಿ ಸಾಲು**

### ರೋಡ್ ರೇಜ್‌ಗೆ ಬೆಚ್ಚಿಬಿದ್ದ ದಂಪತಿ



**ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿ ಮತ್ತೆ ರೋಡ್ ರೇಜ್ ಪ್ರಕರಣ ಕಂಡುಬಂದಿದೆ. ದೀಪಾವಳಿ ಶಾಪಿಂಗ್ ಮುಗಿಸಿ ಮನೆಗೆ ಹೊರಟಿದ್ದ ಕುಟುಂಬದ ಮೇಲೆ ಪುಂಡರು ದಾಳಿ ನಡೆಸಿರುವ ಘಟನೆ ಬೆಂಗಳೂರಿನ ಕಸವನಹಳ್ಳಿ ಅಮೃತ ಕಾಲೇಜು ಬಳಿ ನಡೆದಿದೆ. ಘಟನೆಯಲ್ಲಿ 5 ವರ್ಷದ ಮಗುವಿನ ತಲೆಗೆ ಪೆಟ್ಟಾಗಿದೆ.

» **5 ವರ್ಷದ ಮಗುವಿನ ತಲೆಗೆ ಗಾಯ**

**ಏನಿದು ಘಟನೆ?:** ಅಕ್ಟೋಬರ್ 30 ರಂದು ದೀಪಾವಳಿ ಶಾಪಿಂಗ್‌ಗೆ ತಮ್ಮ ಮಕ್ಕಳೊಂದಿಗೆ ಬಂದಿದ್ದ ದಂಪತಿ ರಾತ್ರಿ 9:30ರ ಸುಮಾರಿಗೆ ಶಾಪಿಂಗ್ ಮುಗಿಸಿ ಹೊರಟಿದ್ದರು. ಚಾಲನ ಸೀಟ್‌ನಲ್ಲಿ ಪತಿ ಅನೂಪ್ ಜಾರ್ಜ್, ಪಕ್ಕದಲ್ಲಿ ಪತ್ನಿ, ಹಿಂಭಾಗ ಇಬ್ಬರು ಮಕ್ಕಳು ಕುಳಿತಿದ್ದರು. ಪುಟ 2

# ಇಂದೇ ನಟ ದರ್ಶನ್ ಆಸ್ಪತ್ರೆಗೆ ದಾಖಲು!

## ಬೆಂಗಳೂರಿನ ಈ ಹಾಸ್ಪಿಟಲ್‌ನಲ್ಲಿ 'ದಾಸ'ನಿಗೆ ಚಿಕಿತ್ಸೆ ಫಿಕ್ಸ್!

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್‌ಗೆ ಷರತ್ತುಬದ್ಧ ಮಧ್ಯಂತರ ಜಾಮೀನು ಸಿಕ್ಕಿದೆ. ದರ್ಶನ್ ಬಳ್ಳಾರಿ ಜೈಲಿನಿಂದ ಬೆಂಗಳೂರಿಗೆ ಆಗಮಿಸಿದ್ದಾರೆ. ಬೆಂಗಳೂರಿನ ಹೊಸಕೆರೆಹಳ್ಳಿಯ ವಿಜಯಲಕ್ಷ್ಮಿ ನಿವಾಸಕ್ಕೆ ದರ್ಶನ್ ಆಗಮಿಸಿದ್ದಾರೆ. ದರ್ಶನ್ ಆಗಮನ ಹಿನ್ನೆಲೆಯಲ್ಲಿ ಮನೆ ಬಳಿ ಅಭಿಮಾನಿಗಳ ಜಮಾಯಿಸಿ ದರ್ಶನ್ ದರ್ಶನ್ ಎಂದು ಘೋಷಣೆ ಕೂಗಿದ್ದಾರೆ. ಅಭಿಮಾನಿಗಳನ್ನ ನಿಯಂತ್ರಿಸಲು ಸೆಕ್ಯೂರಿಟಿ ಗಾರ್ಡ್ ಗಳು ಹಾಗೂ ಪೊಲೀಸರು ಹರಸಾಹಸ ಪಟ್ಟಿದ್ದಾರೆ.



**ನಿವಾಸದ ಬಳಿ ಭಾರೀ ಭದ್ರತೆ:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್‌ಗೆ ಷರತ್ತುಬದ್ಧ ಮಧ್ಯಂತರ ಜಾಮೀನು ಸಿಕ್ಕಿದ ಬೆನ್ನಲ್ಲೇ ಆರ್.ಆರ್.ನಗರ ದರ್ಶನ್ ನಿವಾಸಕ್ಕೆ ಭಾರೀ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ದರ್ಶನ್ ಮನೆ ಸಂಪರ್ಕಿಸುವ ರಸ್ತೆಗೆ ಬ್ಯಾರಿಕೇಡ್ ಹಾಕಿ ಮೂವರು ಪಿಎಸ್‌ಐ ನೇತೃತ್ವದಲ್ಲಿ ಮನೆ ಬಳಿ ಭದ್ರತೆ ನೀಡಲಾಗಿದೆ. ಫ್ಯಾನ್ಸ್ ಹುಚ್ಚಾಟ ತಡೆಗೆ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಇನ್ನು, ರಾತ್ರಿ ಮನೆಗೆ ಬಂದ ದರ್ಶನ್ ಊಟ ಮಾಡಿದ ಬಳಿಕ ನಿದ್ದೆಗೆ ಜಾರಿದ್ದು, ಇಂದು ಮಧ್ಯಾಹ್ನದ ಬಳಿಕ ಆಸ್ಪತ್ರೆಗೆ ತೆರಳುವ ಸಾಧ್ಯತೆ ಇದೆ. ಬೆಂಗಳೂರಿನ ಮಣಿಪಾಲ್, ಪುಟ 2

# 500 ವರ್ಷಗಳ ಬಳಿಕ ಅಯೋಧ್ಯೆಯಲ್ಲಿ ವಿಶ್ವದಾಖಲೆಯ ದೀಪಾವಳಿ!

**ಅಯೋಧ್ಯೆ:** ನೂತನ ರಾಮಮಂದಿರದಲ್ಲಿ ರಾಮಲಲ್ಲಾ ವಿರಾಜಮಾನನಾದ ಬಳಿಕ ಮೊದಲ ದೀಪಾವಳಿಗೆ ಅಯೋಧ್ಯೆ ಸಾಕ್ಷಿಯಾಗಿದೆ. ರಾಮಲಲ್ಲಾನ ಮೊದಲ ದೀಪಾವಳಿ ಹಿನ್ನೆಲೆಯಲ್ಲಿ ಬುಧವಾರ ಸರಯೂ ನದಿ ತೀರದಲ್ಲಿ ಏಕಕಾಲಕ್ಕೆ 25 ಲಕ್ಷಕ್ಕೂ ಹೆಚ್ಚು ದೀಪ ಬೆಳಗಿ ಮತ್ತು ಏಕಕಾಲಕ್ಕೆ 1121 ಮಂದಿಯಿಂದ ದೀಪಾರತಿ ಮಾಡುವ ಮೂಲಕ ಹೊಸ ಗಿನ್ನೆಸ್ ದಾಖಲೆ ರಚನೆಯಾಗಿದೆ. ಪುಟ 2



# ತಾರಕಕ್ಕೇರಿದ ವಕ್ಫ್ ವಿವಾದ!

## ಎರಡು ಕೋಮಿನ ನಡುವೆ ಮಾರಾಮಾರಿ, ಕಲ್ಲು ತೂರಾಟ!

**ಹಾವೇರಿ:** ರಾಜ್ಯದ ಹಲವೆಡೆ ವಕ್ಫ್ ಆಸ್ತಿ ವಿವಾದ ಭಾರೀ ಸದ್ದು ಮಾಡುತ್ತಿದ್ದು, ಇದೀಗ ಹಾವೇರಿ ಜಿಲ್ಲೆಗೂ ಕಾಲಿಟ್ಟಿದೆ. ಬೇರೆ ಜಿಲ್ಲೆಗಳಲ್ಲಿ ವಕ್ಫ್ ಬೋರ್ಡ್ ಹಾಗೂ ಸರ್ಕಾರದ ವಿರುದ್ಧ ಪ್ರತಿಭಟನೆಗಳನ್ನು ಮಾಡುತ್ತಿದ್ದರೆ, ಹಾವೇರಿಯಲ್ಲಿ ಒಂದು ಹಂತ ಮುಂದಕ್ಕೆ ಹೋಗಿದೆ. ಹೌದು ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಕಡಕೋಳ ಗ್ರಾಮದಲ್ಲಿ ವಕ್ಫ್ ಬೋರ್ಡ್ ಹೆಸರಿನಲ್ಲಿ ಖಾತೆ ನೋಂದಣಿಯಾಗಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ. ತಾವು ವಾಸವಿದ್ದ ಮನೆಗಳನ್ನು ಖಾಲಿ ಮಾಡಿಸಬಹುದು ಎಂಬ ಭೀತಿಯಿಂದ ಉದ್ರಿಕ್ತರ ಗುಂಪು ಮುಸ್ಲಿಂ ಮುಖಂಡರ ಮನೆಗಳ ಮೇಲೆ ಕಲ್ಲು ತೂರಾಟ ನಡೆಸಿದೆ.

ವಕ್ಫ್ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಕಳೆದ ಸೆಪ್ಟೆಂಬರ್ 3 ರಂದು ಸಭೆ ನಡೆಸಿದರು. ಈ ವೇಳೆ ಕಡಕೋಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ವಕ್ಫ್ ಆಸ್ತಿಗಳನ್ನು ವಕ್ಫ್ ಸಂಸ್ಥೆ ಹೆಸರಿನಲ್ಲಿ ಖಾತೆಕರಣ ಮಾಡಬೇಕು. ವಕ್ಫ್ ಆಸ್ತಿಗೆ ಸೇರಿದ ಖಾತೆಗಳಲ್ಲಿ ವಕ್ಫ್ ಆಸ್ತಿ ಎಂದು ಲಾಕ್ ಮಾಡಲು ಪಿಡಿಓಗಳಿಗೆ ಆದೇಶ ನೀಡಿದ ಹಿನ್ನೆಲೆಯಲ್ಲಿ ಕಳೆದ ತಿಂಗಳು ಸೆಪ್ಟೆಂಬರ್ 27 ರಂದೇ ಜಿ.ಪಂ ಸಿಇಓ ಅಕ್ಷಯ್ ಶ್ರೀಧರ್ ಅವರಿಂದ ಸೂಚನೆ ನೀಡಲಾಗಿದೆ. ಈ ಹಿನ್ನಲೆಯಲ್ಲಿ ಸರ್ಕಾರದ ನಡೆಯಿಂದ ಜನರು ಆಕ್ರೋಶಗೊಂಡು ಗಲಾಟೆ ಮಾಡಿದ್ದಾರೆ ಎಂದು ಹೇಳಲಾಗಿದೆ.

ಮುಸ್ಲಿಂ ಮುಖಂಡ ಮೊಹಮ್ಮದ್ ರಫಿ ಎಂಬುವರ ಮನೆ ಮೇಲೆ ಉದ್ರಿಕ್ತರ ಗುಂಪು ಕಲ್ಲು ತೂರಾಟ ನಡೆಸಿದೆ. ಅಲ್ಲದೆ, ಮನೆ ಮುಂದಿದ್ದ ಬೈಕ್ ಅನ್ನು ಜಖಂ ಮಾಡಲಾಗಿದೆ. ವಕ್ಸ್ ಹೆಸರಿಗೆ ಆಸ್ತಿ ಮನೆಗಳನ್ನು ವರ್ಗಾಯಿಸಿಕೊಂಡು ಖಾಲಿ ಮಾಡಿಸುತ್ತಾರೆ ಎಂಬ ವದಂತಿಯಿಂದ ಈ ಘಟನೆ ನಡೆದಿದೆ ಎಂದು ತಿಳಿದುಬಂದಿದೆ. ಪುಟ 2



## ಕೊಪ್ಪಳದಲ್ಲೂ ಭುಗಿಲೆದ್ದ ವಿವಾದ

### ಹಲವು ರೈತರ ಪಹಣಿಯಲ್ಲಿ ವಕ್ಫ್ ಆಸ್ತಿ ನಮೂದು

**ಕೊಪ್ಪಳ:** ರಾಜ್ಯಾದ್ಯಂತ ವಕ್ಫ್ ಆಸ್ತಿ ವಿವಾದ ಭುಗಿಲೆದ್ದಿರುವ ವೇಳೆ ಇದೀಗ ಕೊಪ್ಪಳ ಜಿಲ್ಲೆಗೂ ವಕ್ಫ್ ಆಸ್ತಿ ರಾದ್ಧಾಂತ ತಲೆದೂರಿದೆ.

ಜಿಲ್ಲೆಯಲ್ಲಿರುವ ರೈತರ ಜಮೀನುಗಳ ಪಹಣಿಯಲ್ಲಿ ನೋಟಿಸ್ ನೀಡದೆಯೇ ವಕ್ಫ್ ಆಸ್ತಿ ಎಂದು ನಮೂದಿಸಿದೆ. 2021ರಲ್ಲಿ ಹಾಗೂ 2023ರಲ್ಲಿ ಅನೇಕ ರೈತರಿಗೆ ನೋಟಿಸ್ ನೀಡದೆಯೇ ಪಹಣಿಯಲ್ಲಿರುವ 11ನೇ ಕಾಲಂನಲ್ಲಿ ವಕ್ಫ್ ಆಸ್ತಿ ಹೆಸರು ಉಲ್ಲೇಖಿಸಲಾಗಿತ್ತು. ಪ್ರಶ್ನೆ ಮಾಡಿದ್ದಕ್ಕೆ ತಮ್ಮ ಮೂಲ ದಾಖಲಾತಿ ತಂದು ಹಾಜರುಪಡಿಸುವಂತೆ ರೈತರಿಗೆ ವಕ್ಫ್ ಬೋರ್ಡ್ ತಿಳಿಸಿತ್ತು.

ಜಿಲ್ಲೆಯ ಕೊಪ್ಪಳ ನಗರ, ಕೊಪ್ಪಳ ತಾಲೂಕಿನ ಕವಲೂರು, ಹೂವಿನಾಳ ಗ್ರಾಮ, ಕುಕನೂರು, ಯಲಬುರ್ಗಾ ತಾಲೂಕಿನ ಅನೇಕ ರೈತರ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದೆ. ವಕ್ಫ್ ಆಸ್ತಿ ವಿವಾದ ಹೆಚ್ಚಾದಂತೆ ತಮ್ಮ ಪಹಣಿಯನ್ನು ರೈತರು ಪರಿಶೀಲಿಸುತ್ತಿದ್ದಾರೆ. ಈ ವೇಳೆ ವಕ್ಫ್ ಆಸ್ತಿ ಎಂದಿರುವುದನ್ನು ಕಂಡು ರೈತರು ಶಾಕ್ ಆಗಿದ್ದಾರೆ.



ಇನ್ನೂ ಕೊಪ್ಪಳ ಜಿಲ್ಲೆಯ ಕುಕನೂರು ಪಟ್ಟಣದಲ್ಲಿರುವ ಪಟ್ಟಣ ಪಂಚಾಯತ್ ಕಚೇರಿಯನ್ನು ವಕ್ಫ್ ಆಸ್ತಿ ಎಂದು ಪುಟ 2

## ರೈತರ ಪಹಣಿಯಲ್ಲಿ ವಕ್ಫ್ ಹೆಸರು

### ಪ್ರಧಾನಿ ಮೋದಿ ಗಮನ ಸೆಳೆಯುವ ಪ್ರಯತ್ನ ಮಾಡಿದ್ದ ಸಾಮಾಜಿಕ ಕಾರ್ಯಕರ್ತ

**ಧಾರವಾಡ:** ರೈತರ ಪಹಣಿಯಲ್ಲಿ ವಕ್ಫ್ ಬೋರ್ಡ್ ಹೆಸರು ನಮೂದಾಗಿರುವ ವಿಚಾರವಾಗಿ ವರ್ಷದ ಹಿಂದೆಯೇ ಧಾರವಾಡದ ಉಪ್ಪಿನಬೆಟಗೇರಿ ಸಾಮಾಜಿಕ ಕಾರ್ಯಕರ್ತರೊಬ್ಬರು ಪ್ರಧಾನಿ ಗಮನ ಸೆಳೆಯುವ ಪ್ರಯತ್ನ ಮಾಡಿರುವುದು ಬೆಳಕಿಗೆ ಬಂದಿದೆ. ರೈತರ ಪಹಣಿಯಲ್ಲಿ ವಕ್ಫ್ ಹೆಸರು ನಮೂದಾಗಿರುವ ವಿಚಾರವಾಗಿ ಸಾಮಾಜಿಕ ಕಾರ್ಯಕರ್ತ ಕೃಷ್ಣಪ್ಪ ಬುದ್ನಿ ಪ್ರಧಾನಿ ಮೋದಿಗೆ ಪತ್ರ ಬರೆದಿದ್ದರು.



ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದ ಕೃಷ್ಣಪ್ಪ ಬುದ್ನಿ, ರೈತರ ಪಹಣಿಯಲ್ಲಿ ವಕ್ಫ್ ಬೋರ್ಡ್ ಹೆಸರು ನಮೂದಾಗುವುದನ್ನು ತಡೆಯಲು ಆಗ್ರಹಿಸಿದ್ದರು. ಯಾವ ಮಾನದಂಡದ ಮೇಲೆ ಹೀಗೆ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದ್ದರು. 2023ರ ನವೆಂಬರ್ 28ರಂದು ಪ್ರಧಾನಿಗೆ ಪತ್ರ ಕಳುಹಿಸಿದ್ದರು. 2023ರ ಡಿಸೆಂಬರ್ 2ರಂದು ತಲುಪಿದ್ದ ಪತ್ರ ಪ್ರಧಾನಿ ಕಚೇರಿ ತಲುಪಿತ್ತು. ಬಳಿಕ ಡಿಸೆಂಬರ್ 8ರಂದು ಕೃಷ್ಣಪ್ಪಗೆ ಪ್ರಧಾನಿ ಕಾರ್ಯಾಲಯದಿಂದ ಫೋನ್ ಕರೆ ಬಂದಿತ್ತು. ಪತ್ರ ಬರೆದು, ದೂರು ಕೊಡುತ್ತಿರುವುದು ನೀವೇನಾ ಎಂದು ಕೇಳಿ ಪಿಎಂಓ ಸಿಬ್ಬಂದಿ ಖಚಿತಪಡಿಸಿಕೊಂಡಿದ್ದರು. ಅಲ್ಲದೆ, ನಿಮ್ಮ ದೂರನ್ನು ಪ್ರಧಾನಿ ಗಮನಕ್ಕೆ ತರುವುದಾಗಿಯೂ ಹೇಳಿದ್ದರು.

**ಕಳೆದ ವರ್ಷವೇ ಶುರುವಾಗಿತ್ತು ಹೋರಾಟ:** ಉಪ್ಪಿನ ಬೆಟಗೇರಿ ಗ್ರಾಮದ ಅನೇಕರ ಪಹಣಿಯಲ್ಲಿ ವಕ್ಫ್ ಹೆಸರು ಬಂದಿದ್ದು ಕಳೆದ ವರ್ಷವೇ ತಿಳಿದುಬಂದಿತ್ತು. ಇದಕ್ಕಾಗಿ ರೈತರು ಕಚೇರಿಯಿಂದ ಕಚೇರಿಗೆ ಅಲೆದಾಡಿದ್ದರು. ಪುಟ 2

## ಮಾಜಿ ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಮಗನ ಆಸ್ತಿಗೂ ಈಗ ವಕ್ಫ್ ಕಂಟಕ!



**ಚಿಕ್ಕೋಡಿ:** ರೈತರ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಿದ್ದನ್ನು ವಿರೋಧಿಸಿ ರಾಜ್ಯ ಬಿಜೆಪಿ ನಾಯಕರು ಸರ್ಕಾರದ ವಿರುದ್ಧ ಹರಿಹಾಯುತ್ತಿದ್ದಾರೆ. ಆದರೆ ವಕ್ಫ್ ಬೋರ್ಡ್ ವಕ್ರ ದೃಷ್ಟಿ ಬಿಜೆಪಿ ನಾಯಕರ ಮೇಲೆಯೇ ಬಿದ್ದಿದೆ. ಮಾಜಿ ಹಜ್ ಮತ್ತು ವಕ್ಫ್ ಬೋರ್ಡ್ ಸಚಿವೆ ಶಶಿಕಲಾ ಜೊಲ್ಲೆ ಕುಟುಂಬಕ್ಕೆ ವಕ್ಫ್ ಬೋರ್ಡ್ ಶಾಕ್ ನೀಡಿದೆ. ಜೊಲ್ಲೆ ದಂಪತಿಯ ಕಿರಿಯ ಪುತ್ರನಿಗೆ ಸೇರಿದ ಜಮೀನಿನ ಪಹಣಿ ಪತ್ರದಲ್ಲಿ ''ವಕ್ಫ್ ಆಸ್ತಿ'' ಎಂದು ನಮೂದಿಸಲಾಗಿದೆ. ಪುಟ 2

**ಶಿಗ್ಗಾಂವಿ ಉಪಚುನಾವಣೆ**

## ಬಿಜೆಪಿ ಭದ್ರಕೋಟೆ ಛಿದ್ರ ಮಾಡಲು ಕಾಂಗ್ರೆಸ್ ತಂತ್ರ

**ಹಾವೇರಿ:** ಶಿಗ್ಗಾಂವಿ ಉಪಚುನಾವಣೆ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಬಿರುಸಿನ ಪ್ರಚಾರ ಪ್ರಾರಂಭಿಸಿವೆ. ಅಧಿಕೃತವಾಗಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರಖಾನ್ ಪಠಾಣ್ ಆಗುತ್ತಿದ್ದಂತೆಯೇ ಬಂಡಾಯ ಅಭ್ಯರ್ಥಿಯಾಗಿ ಖಾದ್ರಿ ನಾಮಪತ್ರ ಸಲ್ಲಿಸಿದ್ದರು. ಅದರೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಮತ್ತು ಜಮೀರ್ ಅಹ್ಮದ್ ನೇತ್ರತ್ವದಲ್ಲಿ ಸಂಧಾನ ಕಾರ್ಯ ಯಶಸ್ವಿಯಾಗಿದೆ. ಸಚಿವ ಜಮೀರ್ ಅಹ್ಮದ್ ನೇತ್ರತ್ವದಲ್ಲಿ ಪೊಲೀಸ್ ಮತ್ತು ಬಿಎಸ್‌ಎಫ್ ಯೋಧರ ಬಿಗಿ ಭದ್ರತೆಯಲ್ಲಿ ಖಾದ್ರಿ ತಹಶಿಲ್ದಾರ ಕಚೇರಿಗೆ ಕರೆದುಕೊಂಡು ಬಂದು ನಾಮಪತ್ರ ವಾಪಸು ಪಡೆದುಕೊಂಡರು. ಅದರೂ ಕಾರ್ಯಕರ್ತರು ಅಸಮಾಧಾನ ಹೊರ



ಹಾಕಿದ್ದು, ಗೆಲ್ಲುವ ವ್ಯಕ್ತಿಗೆ ಟಿಕೆಟ್ ಕೊಡುವುದು ಬಿಟ್ಟು ಬೇರೆ ವ್ಯಕ್ತಿ ಟಿಕೆಟ್ ನೀಡಿದ್ದೀರಿ ಎಂದು ಆಕ್ರೋಶ ಹೊರಹಾಕಿದ್ದಾರೆ. ಖಾದ್ರಿ, ಸೂಕ್ತವಾದ ಸ್ಥಾನಮಾನ ಕೊಡುವಂತೆ ಆಗ್ರಹಿಸಿದ್ದರು. ಜೊತೆಗೆ ಸಿದ್ದರಾಮಯ್ಯ, ಡಿಕೆಶಿ ಮತ್ತು ಜಮೀರ ಅಹ್ಮದ್ ಮತ್ತು ಮುಖಂಡರ ಮಾತಿಗೆ ಬೆಲೆಕೊಟ್ಟು ವಾಪಸು ತೆಗೆದುಕೊಂಡಿದ್ದೇನೆ. ಪುಟ 2

### ಡಿಕೆಶಿಗೆ ಕನಸಿನಲ್ಲಿ ಮಹಿಳೆಯರು, ದೇವರು ಬಂದು ಹೇಳಿದ್ದಾರೋ ಶಕ್ತಿ ಯೋಜನೆ ಸ್ಥಗಿತ ಸುಳಿವಿಗೆ

## ಕುಮಾರಸ್ವಾಮಿ ಕಿಡಿ

**ಬೆಂಗಳೂರು:** ಕರ್ನಾಟಕ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯನ್ನು ಸ್ಥಗಿತಗೊಳಿಸುವ ಬಗ್ಗೆ ಡಿಸಿಎಂ ಡಿಕೆ ಶಿವಕುಮಾರ್ ಕೊಟ್ಟ ಸುಳಿವಿಗೆ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಡಿಕೆ ಶಿವಕುಮಾರ್ ಹೇಳಿ ಬಗ್ಗೆ ಬೆಂಗಳೂರನಲ್ಲಿ ಪ್ರತಿಕ್ರಿಯಿಸಿದ ಅವರು, ಅವರಿಗೆ (ಡಿಸಿಎಂಗೆ) ಕನಸಿನಲ್ಲಿ ಬಂದು ಮಹಿಳೆಯರು ಹೇಳಿದ್ದಾರೋ ಅಥವಾ ದೇವರು ಬಂದು ಜ್ಞಾನೋದಯ ಮಾಡಿದ್ದಾನೆಯೇ ಒಂದೊಂದೇ ಗ್ಯಾರಂಟಿ ಯೋಜನೆಗಳನ್ನು ಮರೆಯಾಗಿಸಲು ಇದೊಂದು ಕಾರಣ ಅಷ್ಟೆ ಎಂದಿದ್ದಾರೆ.



ಟ್ವೀಟ್ ಮೂಲಕ ಮಹಿಳೆಯರು ತಿಳಿಸಿದ್ದಾರೆಂದು ಹೇಳುತ್ತಾರೆ. ಇವರಿಗೆ ಈಗ ಜ್ಞಾನೋದಯ ಆಗಿದೆಯಾ ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

**ಗ್ಯಾರಂಟಿ ಯೋಜನೆಗಳ ರದ್ದತಿಯ ಮೊದಲ ಹಂತ:** ಶಕ್ತಿ ಯೋಜನೆ ಮೂಲಕ ಅವರನ್ನು ಬಲಾಢ್ಯರನ್ನಾಗಿ ಮಾಡಿದ್ದೀರಾ ಸರ್ಕಾರಕ್ಕೆ ಈ ಯೋಜನೆಯನ್ನು ದೀರ್ಘಾವಧಿಗೆ ಮಾಡಲು ಸಾಧ್ಯ ಆಗುತ್ತಿಲ್ಲ. ಪುಟ 2

**ಬೆಂಗಳೂರಿನಲ್ಲಿ ಪಟಾಕಿ ಮಾರಾಟ ಜೋರು**

## ಗ್ರಾಹಕರಿಗೆ ಬೆಲೆಯೇರಿಕೆ ಬಿಸಿ

**ಬೆಂಗಳೂರು:** ದೀಪಗಳ ಹಬ್ಬ ದೀಪಾವಳಿಗೆ ರಾಜಧಾನಿ ಬೆಂಗಳೂರು ಭರ್ಜರಿ ಸಿದ್ಧತೆ ಮಾಡಿದ್ದು, ನಗರದಲ್ಲಿ ಸಂಭ್ರಮದ ವಾತಾವರಣ ಮನೆ ಮಾಡಿದೆ. ಇತ್ತ ಪಟಾಕಿ ಮಾರಾಟ ಕೂಡ ಜೋರಾಗಿದೆ. ಬೆಂಗಳೂರಿನ ಚಾಮರಾಜಪೇಟೆ ಸೇರಿ ಹಲವೆಡೆ ಮೈದಾನಗಳಲ್ಲಿ ಪಟಾಕಿ ಸ್ಟಾಲ್ ಗಳಲ್ಲಿ ಭರ್ಜರಿ ವ್ಯಾಪಾರವಾಗುತ್ತಿದೆ. ಮೊದಲ ದಿನವಾದ್ದರಿಂದ ಗ್ರಾಹಕರ ಸಂಖ್ಯೆ ಕಡಿಮೆ ಇದ್ದರೂ ಕೂಡ ಹಾಕಿರುವ ಬಂಡವಾಳಕ್ಕೆ ತಕ್ಕ ವ್ಯಾಪಾರ ಆಗುತ್ತಿರುವುದಕ್ಕೆ ವ್ಯಾಪಾರಿಗಳು ಖುಷಿಯಾಗಿದ್ದಾರೆ. ಇನ್ನು ಹಸಿರು ಪಟಾಕಿಗಳ ಮಾರಾಟ ಮಾಡಲು ಮಾತ್ರ ಅವಕಾಶ ಕೊಟ್ಟಿರುವುದರಿಂದ ಪೊಲೀಸರು ನೀಡಿರುವ ಮಾರ್ಗಸೂಚಿಯಂತೆಯೇ ಸುರಕ್ಷತಾ



ಕ್ರಮಗಳನ್ನು ಅನುಸರಿಸಿ ಪಟಾಕಿ ವ್ಯಾಪಾರ ನಡೆಸಲಾಗುತ್ತಿದೆ.

ಇನ್ನು ಬಗೆ ಬಗೆಯ ಗ್ರೀನ್ ಪಟಾಕಿಗಳು ಮಾರುಕಟ್ಟೆಗೆ ಲಗ್ಗೆಯಿಟ್ಟಿದ್ದು, ಹೊಸೂರಿನಿಂದ ಬಂದಿರುವ ಪಟ್ ಪಟ್ ಪಟಾಕಿಗಳು ಗ್ರಾಹಕರ ಗಮನಸೆಳೆಯುತ್ತಿವೆ. ಗ್ರೀನ್ ಪಟಾಕಿಗೆ ಮಾತ್ರ ಮಾರಾಟಕ್ಕೆ ಅವಕಾಶ ಇರುವುದರಿಂದ ಢಂ ಢಂ ಅಂತಾ ಸದ್ದುಮಾಡುವ ದೊಡ್ಡ ದೊಡ್ಡ ಪಟಾಕಿಗಳಿಗೆ ಹುಡುಕಾಡುವ ಜನರಿಗೆ ಸ್ವಲ್ಪ ಬೇಸರವಾಗಿದೆ. ಪುಟ 2

ಸಂಜೆ ಟಿಪ್ಸ್

## ಟಾಟಾ ಕ್ಲಿಕ್ ಲಕ್ಸುರಿ ಸಹಯೋಗದಲ್ಲಿ ಭಾರತದಲ್ಲಿ ಡಿಜಿಟಲ್ ಬೋಟಿಕ್ ಆರಂಭಿಸಿದ ಬುಲ್ಗರಿ

ಇಟಲಿಯ ರೋಮ್ನ ಸುಂದರ ಚಿನ್ನಾಭರಣ ಬ್ರ್ಯಾಂಡ್ ಬುಲ್ಗರಿಯ ಜೊತೆಗಿನ ವಿಶೇಷ ಸಹಯೋಗದಲ್ಲಿ ಭಾರತದಲ್ಲಿ ಮೊದಲ ಡಿಜಿಟಲ್ ಬೋಟಿಕ್ ಆರಂಭಿಸುತ್ತಿರುವುದಾಗಿ ಭಾರತದ ಪ್ರಮುಖ ವಿಲಾಸಿ ಜೀವನಶೈಲಿ ಉತ್ಪನ್ನಗಳನ್ನು ಮಾರಾಟ ಮಾಡುವ ಟಾಟಾ ಕ್ಲಿಕ್ ಲಕ್ಸುರಿ ಪ್ರಕಟಿಸಿದೆ.ಈ ಸಹಯೋಗದ ನೆರವಿನಿಂದ ಬುಲ್ಗರಿ-ಯು ಇದೇ ಮೊದಲ ಬಾರಿಗೆ ಭಾರತದ ಇ-ಕಾಮರ್ಸ್ ಜಗತ್ತಿಗೆ ಪ್ರವೇಶಿಸುತ್ತಿದೆ. ಈ ದುಬಾರಿ ವಸ್ತ್ರ ಮತ್ತಿತರ ಪರಿಕರಗಳ ಡಿಜಿಟಲ್ ಮಾರಾಟ ಮಳಿಗೆಯು (ಬೋಟಿಕ್) ಈಗ ಭಾರತದಲ್ಲಿ ಕಾರ್ಯಾರಂಭ ಮಾಡಿರುವುದರಿಂದ ದೇಶದಾದ್ಯಂತದ ವಿವೇಚನಾಶೀಲ ಗ್ರಾಹಕರು ಮನೆಯಲ್ಲಿ ಕುಳಿತುಕೊಂಡೇ ಬುಲ್ಗರಿ-ದ ಸಾಂಪ್ರದಾಯಿಕ ಆಭರಣಗಳು, ಹ್ಯಾಂಡ್ಬ್ಯಾಗ್ ಮತ್ತು ಕೈಗಡಿಯಾರಗಳನ್ನು ಆರಾಮವಾಗಿ ಖರೀದಿಸಬಹುದು. ತ್ವರಿತವಾಗಿ ಬದಲಾಗುತ್ತಿರುವ ಜಾಗತಿಕ ಮಾರುಕಟ್ಟೆ ಮತ್ತು ಭಾರತದ ಗ್ರಾಹಕರ ಖರೀದಿ ನಿರೀಕ್ಷೆಗಳು ವೇಗವಾಗಿ ಬದಲಾಗುತ್ತಿದ್ದು, ಐಷಾರಾಮಿ ಇ-ಕಾಮರ್ಸ್ ವೇದಿಕೆಗಳು ದೇಶದಾದ್ಯಂತ ಹೊಸ ಗ್ರಾಹಕರನ್ನು ಆಕರ್ಷಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಗಮನಾರ್ಹವಾಗಿ ಬೆಳೆಯುತ್ತಿರುವ ಈ ಹೊಸ ಗ್ರಾಹಕರ ನೆಲೆಗೆ ತನ್ನ ದುಬಾರಿ ಉತ್ಪನ್ನಗಳ ಕೊಡುಗೆಯನ್ನು ಸುಲಭವಾಗಿ ತಲುಪಿಸಲು ಟಾಟಾ ಕ್ಲಿಕ್ ಲಕ್ಸುರಿಯ ಡಿಜಿಟಲ್ ಪರಿಣತಿ, ವಹಿವಾಟಿನ ವ್ಯಾಪಕತೆ ಮತ್ತು ಭಾರತದ ಗ್ರಾಹಕರ ಜೊತೆಗಿನ ಸುದೀರ್ಘ ಸಂಬಂಧದ ಜೊತೆಗೆ ಬುಲ್ಗರಿ ತನ್ನ ಅಸಾಧಾರಣ ಪರಿಣತಿಯನ್ನು ಒಟ್ಟುಗೂಡಿಸಲು ಈ ಪಾಲುದಾರಿಕೆ ಮಾಡಿಕೊಂಡಿದೆ. ಭಾರತದ ಸಂಪ್ರದಾಯ ಹಾಗೂ ಸಂಸ್ಕೃತಿಯಿಂದ ಸ್ಫೂರ್ತಿಪಡೆದು ತಯಾರಿಸಲಾಗಿರುವ ಬಿ.ಜಿರೊ 1 ಕಡ ಬ್ರೆಸ್ಲೆಟ್ ಮತ್ತು ಸಾಂಪ್ರದಾಯಿಕ ಬುಲ್ಗರಿ ಬುಲ್ಗರಿ ಮಂಗಳಸೂತ್ರದಿಂದ ಹಿಡಿದು ಕಾಲಾತೀತ ಸರ್ಪೆಂಟಿ ವೈಪರ್ ಬ್ರೆಸ್ಲೆಟ್ಗಳು ಮತ್ತು ಬಿ.ಜಿರೊ 1 ಉಂಗುರಗಳು ಸೇರಿದಂತೆ ಆಭರಣಗಳ ವಿಶಾಲ ಶ್ರೇಣಿಯವರೆಗೆ, ಟಾಟಾ ಕ್ಲಿಕ್ ಲಕ್ಸುರಿ ವೇದಿಕೆಯಲ್ಲಿ ಇರುವ ಬುಲ್ಗರಿ ಡಿಜಿಟಲ್ ಬೊಟಿಕ್, ಅತ್ಯಂತ ಕುಶಲತೆಯಿಂದ ತಯಾರಿಸಿದ ಆಭರಣಗಳ ಆಯ್ಕೆ ಅವಕಾಶವನ್ನು ನೀಡುತ್ತದೆ.




## ಸಿಹಿ ಕುಂಬಳಕಾಯಿ ಪಾಯಸ

ಪಾಕ ಶಾಲೆ



### ಬೇಕಿರುವ ಸಾಮಗ್ರಿ

ಸಿಹಿ ಕುಂಬಳಕಾಯಿ-2 ಕಪ್, ಬೆಲ್ಲ-1 ಕಪ್, ತೆಂಗಿನಕಾಯಿ ತುರಿ-1 ಕಪ್, ತುಪ್ಪ-2 ಟೇಬಲ್ ಸ್ಪೂನ್, ಗೋಡಂಬಿ,-ಸ್ವಲ್ಪ, ದ್ರಾಕ್ಷಿ-ಸ್ವಲ್ಪ, ಹಾಲು-1 ಕಪ್, ಏಲಕ್ಕಿ-1.

### ಮಾಡುವ ವಿಧಾನ

ಮೊದಲಿಗೆ ಕುಂಬಳಕಾಯಿ ಸಿಪ್ಪೆ ತೆಗೆದು ಚಿಕ್ಕ ಚಿಕ್ಕ ಹೋಳುಗಳನ್ನಾಗಿ ಮಾಡಿಕೊಳ್ಳಿ. ನಂತರ ಒಂದು ದಪ್ಪ ತಳದ ಪಾತ್ರೆಗೆ ತುಪ್ಪ ಹಾಕಿ ದ್ರಾಕ್ಷಿ, ಗೋಡಂಬಿ ಹುರಿದುಕೊಳ್ಳಿ. ನಂತರ ಕುಂಬಳಕಾಯಿ ಹೋಳುಗಳನ್ನು ಬಾಣಲೆಯಲ್ಲಿ ಹುರಿದುಕೊಂಡು ಒಂದು ಪ್ಲೇಟ್ ಮುಚ್ಚಿ ಬೇಯಲು ಬಿಡಿ. ನಂತರ ಒಂದು ಮಿಕ್ಸಿ ಜಾರಿಗೆ ತೆಂಗಿನಕಾಯಿ ತುರಿ, ಏಲಕ್ಕಿ ಹಾಕಿ ರುಬ್ಬಿಕೊಳ್ಳಿ.

ನಂತರ ಸ್ವಲ್ಪ ನೀರು ಸೇರಿಸಿ ರುಬ್ಬಿಕೊಳ್ಳಿ. ಕುಂಬಳಕಾಯಿ ಬೆಂದ ನಂತರ ತೆಂಗಿನಕಾಯಿ ಹಾಲು ಸೇರಿಸಿ ಬೆಲ್ಲ ಹಾಕಿ ಕುದಿಸಿ. ಬೇಕಿದ್ದರೆ ನೀರು ಸೇರಿಸಿಕೊಳ್ಳಿ. ನಂತರ ಇದು ಸ್ವಲ್ಪ ತಣಿದ ನಂತರ 1 ಕಪ್ ಹಾಲು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿಕೊಂಡು ಸವಿಯಿರಿ.

## ಮತ್ತೊಮ್ಮೆ ನಟ ಸಲ್ಮಾನ್ ಖಾನ್‌ಗೆ ಕೊಲೆ ಬೆದರಿಕೆ



ಬಾಲಿವುಡ್ ನಟ ಸಲ್ಮಾನ್ ಖಾನ್ಗೆ ಅಪರಿಚಿತ ವ್ಯಕ್ತಿಯಿಂದ ಮತ್ತೆ ಜೀವ ಬೆದರಿಕೆ ಬಂದಿದ್ದು, 2 ಕೋಟಿ ರೂ.ಗೆ ಬೇಡಿಕೆಯಿಟ್ಟಿರುವುದಾಗಿ ಮುಂಬೈ ಟ್ರಾಫಿಕ್ ಪೊಲೀಸರಿಗೆ ಸಂದೇಶ ಕಳುಹಿಸಿದ್ದಾರೆ. ಮೇಲಿಂದ ಮೇಲೆ ಸಲ್ಮಾನ್ ಖಾನ್ ಜೀವಕ್ಕೆ ಕುತ್ತು ಬರುತ್ತಿದ್ದು, ಜೀವ ಬೆದರಿಕೆಗಳು ಬರುತ್ತಲೇ ಇವೆ. ಜೀವ ಬೆದರಿಕೆ ಸಂದೇಶದ ಜೊತೆಗೆ 2 ಕೋಟಿ ರೂ. ಬೇಡಿಕೆಯಿಟ್ಟಿದ್ದಾರೆ. ಜೊತೆಗೆ ಹಣ ನೀಡದಿದ್ದರೆ ಹತ್ಯೆ ಮಾಡುವುದಾಗಿ ಸಂದೇಶ ಕಳುಹಿಸಲಾಗಿದೆ. ಬೆದರಿಕೆ ಸಂದೇಶ ಬಂದ ಬೆನ್ನಲ್ಲೇ ಮುಂಬೈನ ವರ್ಲಿ ಜಿಲ್ಲೆಯ ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಎನ್ಸಿಪಿ ಶಾಸಕ ದಿವಂಗತ ಬಾಬಾ ಸಿದ್ದಿಕಿ ಅವರ ಪುತ್ರ, ಜೀಶನ್ ಸಿದ್ದಿಕಿ ಹಾಗೂ ನಟ ಸಲ್ಮಾನ್ ಖಾನ್ ಇಬ್ಬರಿಗೂ ಜೀವ ಬೆದರಿಕೆ ಬಂದಿತ್ತು. ಇದರ ಬೆನ್ನಲ್ಲೇ ಮುಂಬೈ ಪೊಲೀಸರು ಮಂಗಳವಾರ ನೋಯ್ಡಾದಲ್ಲಿ 20 ವರ್ಷದ ಗುರ್ಫಾನ್ ಖಾನ್ ಎಂಬುವರನ್ನು ಬಂಧಿಸಿದ್ದಾರೆ. ಮೊಹಮ್ಮದ್ ತಯ್ಯಬ್ ಎಂದು ಗುರುತಿಸಲಾದ ಆರೋಪಿಯನ್ನು ನೋಯ್ಡಾದ ಸೆಕ್ಟರ್ 39ರಲ್ಲಿ ಬಂಧಿಸಲಾಗಿದೆ. ಅ.12 ರಂದು, ಬಾಬಾ ಸಿದ್ದಿಕಿ ಅವರು ದಸರಾ ಸಂದರ್ಭದಲ್ಲಿ ಪಟಾಕಿ ಸಿಡಿಸುವಾಗ ಪುತ್ರ, ಜೀಶನ್ ಸಿದ್ದಿಕಿ ಅವರ ಕಚೇರಿಯ ಹೊರಗೆ ಗುಂಡಿನ ದಾಳಿಯಿಂದಾಗಿ ಕೊಲ್ಲಲ್ಪಟ್ಟರು. ಘಟನೆಯ ಒಂದು ದಿನದ ನಂತರ, ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹತ್ಯೆಯ ಹೊಣೆಯನ್ನು ಹೊತ್ತುಕೊಂಡಿತ್ತು. ಸಲ್ಮಾನ್ ಖಾನ್ ಅವರೊಂದಿಗಿನ ನಿಕಟ ಸಂಬಂಧದಿಂದಾಗಿ ಅವರ ಮೇಲೆ ದಾಳಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದುವರೆಗೆ ಬಾಬಾ ಸಿದ್ದಿಕಿ ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು 15 ಮಂದಿಯನ್ನು ಬಂಧಿಸಿದ್ದಾರೆ.

ಸಲ್ಮಾನ್ ಖಾನ್ಗೆ ಜೀವ ಬೆದರಿಕೆ ಬಂದಿರುವುದು ಇದೇ ಮೊದಲಲ್ಲ. ಈ ಹಿಂದೆ 2022 ರಲ್ಲಿ ಸಲ್ಮಾನ್ ಖಾನ್ಗೆ ಜೀವ ಬೆದರಿಕೆಯ ಪತ್ರವು ಅವರ ನಿವಾಸದ ಬಳಿಯ ಬೆಂಚ್ನಲ್ಲಿ ಕಂಡುಬಂದಿತ್ತು. ಮಾರ್ಚ್ 2023ರಲ್ಲಿ ಗೋಲ್ಡಿ ಬ್ರಾರ್ ಅವರು ಕಳುಹಿಸಿದ್ದಾರೆಂದು ಆರೋಪಿಸಲಾದ ಇಮೇಲ್ ಕೂಡ ಖಾನ್ಗೆ ಸಿಕ್ಕಿತ್ತು. 2024 ರಲ್ಲಿ, ಇಬ್ಬರು ಅಪರಿಚಿತ ವ್ಯಕ್ತಿಗಳು ನಕಲಿ ಗುರುತುಗಳನ್ನು ಬಳಸಿಕೊಂಡು ಪನ್ವೆಲ್ನಲ್ಲಿರುವ ಖಾನ್ ಅವರ ಫಾರ್ಮ್ಹೌಸ್ಗೆ ಅತಿಕ್ರಮಣ ಮಾಡಲು ಪ್ರಯತ್ನಿಸಿದ್ದರು.

## ಪಟಾಕಿ ಋತುವಿನಲ್ಲಿ ಕಣ್ಣಿನ ಆರೈಕೆಗೆ ಅಗತ್ಯ ಸಲಹೆಗಳು

ಹೆಲ್ತ್ ಟಿಪ್ಸ್

ದೀಪಾವಳಿಯನ್ನು ಸಾಮಾನ್ಯವಾಗಿ ಎರಡು ಅಗತ್ಯ ಅಂಶಗಳೊಂದಿಗೆ ಆಚರಿಸಲಾಗುತ್ತದೆ: ದೀಪಗಳು ಮತ್ತು ಪಟಾಕಿಗಳು. ಪಟಾಕಿಗಳನ್ನು ಆನಂದಿಸುವಾಗ ವಯಸ್ಸು ಒಂದು ಅಂಶವಲ್ಲ, ಮತ್ತು ಎಲ್ಲರೂ ಅವು ತರುವ ಉತ್ಸಾಹವನ್ನು ಪ್ರೀತಿಸುತ್ತಾರೆ. ಆದಾಗ್ಯೂ, ಈ ಸಂಪ್ರದಾಯವು ಪಟಾಕಿಗಳ ಬಳಕೆಯನ್ನು ಒಳಗೊಂಡಿದ್ದರೆ, ಅವುಗಳನ್ನು ನಿರ್ವಹಿಸುವಾಗ ಹೆಚ್ಚಿನ ಕಾಳಜಿ ವಹಿಸುವುದು ಬಹಳ ಮುಖ್ಯ.

ಈ ಹಬ್ಬದ ಋತುವಿನಲ್ಲಿ ಹೆಚ್ಚಿನ ಪಟಾಕಿ ಗಾಯಗಳು ಕಣ್ಣುಗಳ ಮೇಲೆ ನೇರ ಪರಿಣಾಮ ಬೀರುತ್ತವೆ, ಇದರ ಪರಿಣಾಮವಾಗಿ ಗಂಭೀರ ಗಾಯಗಳಾಗುತ್ತವೆ. ಪ್ರತಿ ವರ್ಷ, ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ಗಾಯಗಳು ವರದಿಯಾಗುತ್ತವೆ, ಇವುಗಳಿಗೆ ಪ್ರಾಥಮಿಕವಾಗಿ ಪಟಾಕಿಗಳು ಕಾರಣವಾಗಿವೆ. ವಾಸ್ತವವಾಗಿ, ಕೈಗಳು ಮತ್ತು ಬೆರಳುಗಳ ನಂತರ ಕಣ್ಣುಗಳು ಎರಡನೇ ಸಾಮಾನ್ಯವಾಗಿ ಪರಿಣಾಮ ಬೀರುವ ಪ್ರದೇಶವಾಗಿದೆ. ಸ್ಪಾರ್ಕ್ಲರ್ಗಳು, ಬಾಂಬ್ಗಳು ಮತ್ತು 'ಚಕ್ರ' ಪಟಾಕಿಗಳು ಸಾಮಾನ್ಯ ಅಪರಾಧಿಗಳಾಗಿವೆ, ಇವೆಲ್ಲವೂ ಗಮನಾರ್ಹ ಕಣ್ಣಿನ ಗಾಯಗಳಿಗೆ ಕಾರಣವಾಗಬಹುದು.

ಡಾ. ಅಗರ್ವಾಲ್ಸ್ ಐ ಆಸ್ಪತ್ರೆಯಲ್ಲಿ ಸಲಹೆಗಾರ ನೇತ್ರಶಾಸ್ತ್ರಜ್ಞ ಡಾ. ರವಿ ದೊರೈರಾಜ್ ಹೇಳಿದರು: ಪಟಾಕಿಗಳನ್ನು ನಿರ್ವಹಿಸುವ ವ್ಯಕ್ತಿಗಳು ಅಪಾಯದಲ್ಲಿದ್ದಾರೆ ಎಂಬುದನ್ನು ಗಮನಿಸುವುದು ಮುಖ್ಯ, ಆದರೆ 50% ಕ್ಕಿಂತ ಹೆಚ್ಚು ಕಣ್ಣಿನ ಗಾಯಗಳು ನಿಂತು ನೋಡುವವರಿಗೆ ಸಂಭವಿಸುತ್ತವೆ. ಬೀದಿ ದಾರಿಹೋಕರು ಸಹ ವಿಶೇಷವಾಗಿ ದುರ್ಬಲರಾಗಿದ್ದಾರೆ, ಏಕೆಂದರೆ ಅವರು ಉರಿಯುತ್ತಿರುವ ಪಟಾಕಿಗಳಿಗೆ ಒಡ್ಡಿಕೊಳ್ಳಬಹುದು. ಕಣ್ಣಿನ ಗಾಯಗಳ ತೀವ್ರತೆಯು ಸೌಮ್ಯ ಕಿರಿಕಿರಿ ಮತ್ತು ಕಾರ್ನಿಯಲ್ ಸವೆತಗಳಿಂದ ಹಿಡಿದು ಗಂಭೀರ ರೆಟಿನಲ್ ತೊಡಕುಗಳು ಮತ್ತು ಶಾಶ್ವತ ಕುರುಡುತನಕ್ಕೆ ಕಾರಣವಾಗುವ ತೆರೆದ ಗ್ಲೋಬ್ ಗಾಯಗಳವರೆಗೆ ಇರುತ್ತದೆ. ಪಟಾಕಿಗಳಲ್ಲಿ ಬೆರೆಸಿದ ಗನ್ಪೌಡರ್ನಲ್ಲಿರುವ ಪದಾರ್ಥಗಳಿಂದಾಗಿ ರಾಸಾಯನಿಕ ಗಾಯಗಳು ಸಂಭವಿಸಬಹುದು ಮತ್ತು ನಿರಂತರ ಹೊಗೆ ಕಣ್ಣುಗಳಲ್ಲಿ ಕಿರಿಕಿರಿ ಮತ್ತು ನೀರು ಬರುವಂತೆ ಮಾಡಬಹುದು. ಪಟಾಕಿಗಳ ಹೊಗೆ ಲಾರಿಂಜೈಟಿಸ್ನಂತಹ ಉಸಿರಾಟದ ಸಮಸ್ಯೆಗಳಿಗೆ ಕಾರಣವಾಗಬಹುದು. ಸ್ಪಾರ್ಕ್ಲರ್ಗಳು ವಿಶೇಷವಾಗಿ ಅಪಾಯಕಾರಿ, ಚಿನ್ನವನ್ನು ಕರಗಿಸುವಷ್ಟು ಹೆಚ್ಚಿನ ತಾಪಮಾನದಲ್ಲಿ ಉರಿಯುತ್ತವೆ (1,800 ಲಿ ಈ), ಇದು ನೀರಿನ ಕುದಿಯುವ ಬಿಂದುವಿಗಿಂತ ಸುಮಾರು 1,000 ಡಿಗ್ರಿಗಳಷ್ಟು ಬಿಸಿಯಾಗಿರುತ್ತದೆ, ಇದು ಮೂರನೇ ಹಂತದ ಸುಟ್ಟಗಾಯಗಳಿಗೆ ಕಾರಣವಾಗಬಹುದು.



ಹೆಚ್ಚಿನ ಪಟಾಕಿಗಳು ಗನ್ಪೌಡರ್ ಅನ್ನು ಹೊಂದಿರುತ್ತವೆ, ಇದು ಈ ಸಾಧನಗಳು ಸ್ಫೋಟಗೊಳ್ಳಲು ಕಾರಣವಾಗುತ್ತದೆ. ಪಟಾಕಿ ಸ್ಫೋಟಗಳು ಅನಿರೀಕ್ಷಿತವಾಗಿರುವುದರಿಂದ, ವ್ಯಕ್ತಿಯು ಜಾಗರೂಕರಾಗಿದ್ದರೂ ಅಥವಾ ಮೇಲ್ವಿಚಾರಣೆಯಲ್ಲಿದ್ದರೂ ಗಾಯಗಳು ಸಂಭವಿಸಬಹುದು. ಹೆಚ್ಚುವರಿಯಾಗಿ, ದೀಪಾವಳಿಯ ಸಮಯದಲ್ಲಿ ಮಾಲಿನ್ಯ ಮಟ್ಟಗಳು ಉತ್ತುಂಗಕ್ಕೇರುತ್ತವೆ, ನೈಟ್ರಸ್ ಆಕ್ಸೈಡ್ ಮತ್ತು ಸಲ್ಫರ್ ಡೈಆಕ್ಸೈಡ್ ಹೆಚ್ಚಳದೊಂದಿಗೆ. ಶಬ್ದ ಮಾಲಿನ್ಯವು ಅನುಮತಿಸುವ ಮಟ್ಟಕ್ಕಿಂತ ಹೆಚ್ಚಾಗುತ್ತದೆ, ಇದು ಒಟ್ಟಾರೆ ಅಪಾಯಕ್ಕೆ ಕಾರಣವಾಗುತ್ತದೆ. ಪಟಾಕಿಗಳು ಹೆಚ್ಚಿನ ವೇಗದಲ್ಲಿ ಚಲಿಸುವ ಬಹು ಸಣ್ಣ ಕಣಗಳನ್ನು ಬಿಡುಗಡೆ ಮಾಡುತ್ತವೆ, ಇದು ಅಂಗಾಂಶಗಳಿಗೆ ಯಾಂತ್ರಿಕ ಹಾನಿಯನ್ನುಂಟುಮಾಡುತ್ತದೆ. ಕಾಂಟ್ಯಾಕ್ಟ್ ಲೆನ್ಸ್ಗಳನ್ನು ಧರಿಸುವವರಿಗೆ, ಪಟಾಕಿಗಳನ್ನು ಸಿಡಿಸುವಾಗ ಎಚ್ಚರಿಕೆ ಅತ್ಯಗತ್ಯ, ಏಕೆಂದರೆ ನೇರ ಶಾಖದ ಮಾನ್ಯತೆ ಕಿರಿಕಿರಿಗೆ ಕಾರಣವಾಗಬಹುದು. ಪಟಾಕಿಯಿಂದ ಕಣ್ಣಿಗೆ ಹಾನಿಯಾಗುವ ಮಟ್ಟವು ಪಟಾಕಿಯ ವೇಗ, ಪರಿಣಾಮದ ತೀವ್ರತೆ, ರಾಸಾಯನಿಕ ಕ್ರಿಯೆಗಳು ಮತ್ತು ಉಷ್ಣ ಸುಟ್ಟಗಾಯಗಳನ್ನು ಅವಲಂಬಿಸಿರುತ್ತದೆ, ''ಎಂದು ಡಾ ದೊರೈರಾಜ್ ಹೇಳಿದರು. ಪ್ರಮುಖ ಕಣ್ಣಿನ ಗಾಯಗಳಲ್ಲಿ ತೆರೆದ ಗ್ಲೋಬ್ ಗಾಯಗಳು (ಕಣ್ಣಿನ ಗೋಡೆಯ ಪೂರ್ಣ ದಪ್ಪ ಗಾಯಗಳು), ಮುಚ್ಚಿದ ಗ್ಲೋಬ್ ಗಾಯಗಳು (ಪೂರ್ಣ ದಪ್ಪ ಛೇದನವಿಲ್ಲದೆ), ಉಂಡೆಗಳು (ಕಣ್ಣಿನ ಸುತ್ತಲಿನ ಮೂಗೇಟುಗಳು), ಲ್ಯಾಮೆಲ್ಲರ್ ಛೇದನಗಳು (ಭಾಗಶಃ ದಪ್ಪ ಗಾಯಗಳು), ಛೇದನಗಳು (ತೀಕ್ಷ್ಣವಾದ ವಸ್ತುಗಳಿಂದ ಉಂಟಾಗುವ ಪೂರ್ಣ ದಪ್ಪ ಗಾಯಗಳು), ಭೇದಿಸುವ ಗಾಯಗಳು (ಪ್ರವೇಶ ಗಾಯದೊಂದಿಗೆ) ಮತ್ತು ರಂಧ್ರಗಾಯಗಳು (ಪ್ರವೇಶ ಮತ್ತು ನಿರ್ಗಮನ ಗಾಯಗಳೊಂದಿಗೆ) ಸೇರಿವೆ.

## ಸರ್ಕಾರಿ ತಮಿಳು ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ

ಟಿಡಬ್ಲ್ಯುಎಸ್ಸಿ ಸಂಸ್ಥೆಯು ಅಕ್ಟೋಬರ್ 25ರಂದು ಬೆಂಗಳೂರು, ಗುರುಗ್ರಾಮ ಮತ್ತು ಮುಂಬೈ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಿತ್ತು. ಟಿಡಬ್ಲ್ಯುಎಸ್ಸಿ ಸಂಸ್ಥೆಯ ಉದ್ಯೋಗಿಗಳು ಪರಿಸರಕ್ಕೆ ಕೊಡುಗೆ ನೀಡುವ ಈ ಕಾರ್ಯಕ್ರಮದಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡರು. ಈ ಸಂದರ್ಭದಲ್ಲಿ ಬೆಂಗಳೂರಿನ ಟಿಡಬ್ಲ್ಯುಎಸ್ಸಿ ಸಂಸ್ಥೆಯ ಉದ್ಯೋಗಿಗಳು ಬೆಂಗಳೂರಿನ ನೀಲಸಂದ್ರದ ಸರ್ಕಾರಿ ಶಾಲೆಯಲ್ಲಿ ನಡೆದ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಗ್ರೋ ಬಿಲಿಯನ್ ಟ್ರೀಸ್ ಯೋಜನೆಯ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಈ ಯೋಜನೆಯು ಶತ ಕೋಟಿ ಮರಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ರಕ್ಷಣೆ ಮಾಡುವ, ಹವಾಮಾನ ಬದಲಾವಣೆ ಸಮಸ್ಯೆ ಎದುರಿಸುವ ಮತ್ತು ಸ್ಥಳೀಯ ಸಮುದಾಯಗಳ ಬದುಕನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿದೆ.

ಟಿಡಬ್ಲ್ಯುಎಸ್ಸಿ ಸಂಸ್ಥೆ ಆಯೋಜಿಸಿದ್ದ ಈ ಸಸಿ ನೆಡುವ ಕಾರ್ಯಕ್ರಮವು ಸಂಸ್ಥೆಯ ಉದ್ಯೋಗಿಗಳಲ್ಲಿ ಮತ್ತು ಸಮುದಾಯದಲ್ಲಿ ಸುಸ್ಥಿರತೆ ಮತ್ತು ಪರಿಸರ ಪ್ರಜ್ಞೆಯನ್ನು ಬೆಳೆಸುವ ಒಂದು ಮಹತ್ವದ ಹೆಜ್ಜೆಯಾಗಿದೆ.



ಗ್ರೋ ಬಿಲಿಯನ್ ಟ್ರೀಸ್ ಜೊತೆ ಪಾಲುದಾರಿಕೆ ಮಾಡುವ ಮೂಲಕ ಟಿಡಬ್ಲ್ಯುಎಸ್ಸಿ ಸಂಸ್ಥೆಯು ಜನರಲ್ಲಿ ಪರಿಸರ ಸ್ನೇಹಿ ಪದ್ಧತಿಗಳನ್ನು ರೂಢಿಸಿಕೊಳ್ಳಲು ಮತ್ತು ಸಣ್ಣ ಪರಿಣಾಮಕಾರಿ ಹೆಜ್ಜೆಗಳನ್ನಿಡುವ ಮೂಲಕ ಜಗತ್ತಿಗೆ ಕೊಡುಗೆ ನೀಡಲು ಪ್ರೋತ್ಸಾಹಿಸುತ್ತಿದೆ. ಸೌಹಾರ್ದಯುತವಾಗಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಉದ್ಯೋಗಿಗಳು ಉತ್ಸಾಹ, ಉಲ್ಲಾಸದಿಂದ ಪಾಲ್ಗೊಂಡರು.

## ಪಿಂಪಲ್ ನಿವಾರಣೆಗೊಂದು ಸಿಂಪಲ್ ಟಿಪ್ಸ್

ಬ್ಯೂಟಿ ಟಿಪ್ಸ್



ಮುಖದಲ್ಲಿ ಮೊಡವೆ ಕಾಣಿಸಿಕೊಂಡರೆ ಅದರಷ್ಟು ದೊಡ್ಡ ತಲೆನೋವು ಯಾವುದು ಇಲ್ಲ. ಮೊಡವೆ ಒಣಗಿದರೂ ಅದರ ಕಲೆ ಮುಖದಿಂದ ಹೋಗುವುದಕ್ಕೆ ತುಂಬಾ ಸಮಯ ತೆಗೆದುಕೊಳ್ಳುತ್ತದೆ. ಅದು ಅಲ್ಲದೇ ಕೆಲವೊಮ್ಮೆ ಈ ಮೊಡವೆಗಳಲ್ಲಿ ಕೀವು ಕೂಡ ಕಾಣಿಸಿಕೊಂಡು ಮುಖವನ್ನು ಮತ್ತಷ್ಟು ಅಸಹ್ಯವಾಗಿಸುತ್ತದೆ.

ಇದಕ್ಕೆ ಒಂದು ಸಿಂಪಲ್ ಆದ ಮನೆ ಮದ್ದು ಇಲ್ಲಿದೆ. ನಿಮ್ಮ ಮುಖಕ್ಕೆ ಸರಿಹೊಂದುವಂತಿದ್ದರೆ ಒಮ್ಮೆ ಮಾಡಿ ನೋಡಿ. ಏಳರಿಂದ ಎಂಟು ತುಳಸಿ ಎಲೆ, ಎರಡು ದಂಟು ಕೊತ್ತಂಬರಿ ಸೊಪ್ಪು ತೆಗೆದುಕೊಂಡು ಕಲ್ಲಿನಿಂದ ಚೆನ್ನಾಗಿ ಜಜ್ಜಿಕೊಳ್ಳಿ. ನಂತರ ಇದನ್ನು ಒಂದು ಚಿಕ್ಕ ತಟ್ಟೆಗೆ ತೆಗೆದುಕೊಂಡು ಇದಕ್ಕೆ ಒಂದು ಟೀ ಚಮಚ ಅಲೋವೇರಾ ಜೆಲ್, ಒಂದು ಚಿಟಿಕೆ ಕಸ್ತೂರಿ ಅರಿಶಿನ ಹಾಕಿ ಚೆನ್ನಾಗಿ ಮಿಶ್ರಣ ಮಾಡಿಟ್ಟುಕೊಳ್ಳಿ. ಮೊದಲು ಮುಖವನ್ನು ಚೆನ್ನಾಗಿ ತೊಳೆದುಕೊಂಡು ಒರೆಸಿಕೊಳ್ಳಿ. ನಂತರ ಈ ಮಿಶ್ರಣವನ್ನು ತೆಗೆದುಕೊಂಡು ಮುಖಕ್ಕೆ ಹಚ್ಚಿ. 15 ನಿಮಿಷಗಳ ನಂತರ ತೊಳೆಯಿರಿ. ಕೆಲವೇ ದಿನಗಳಲ್ಲಿ ಮುಖದಲ್ಲಿರುವ ಮೊಡವೆ ನಿಧಾನಕ್ಕೆ ಕಡಿಮೆಯಾಗುತ್ತದೆ. ಚೆನ್ನಾಗಿ ನೀರು ಕುಡಿಯುವುದನ್ನು ಮರೆಯಬೇಡಿ.

## 'ನಾನು ನಿಮ್ಮ ದೊಡ್ಡ ಅಭಿಮಾನಿ' ಮಣಿರತ್ನಂನಿಂದ ಸಾಯಿ ಪಲ್ಲವಿಗೆ ವಿಶೇಷ ಮೆಚ್ಚುಗೆ



ನಟಿ ಸಾಯಿ ಪಲ್ಲವಿ ಅವರ ಬಗ್ಗೆ ಹೊಸದಾಗಿ ಹೇಳಬೇಕಿಲ್ಲ. ನಟನೆಯಲ್ಲಿ ಅವರನ್ನು ಮೀರಿಸೋರು ಯಾರೂ ಇಲ್ಲ ಎಂದರೂ ತಪ್ಪಾಗಲಾರದು. ಯಾವುದೇ ಗ್ಲಾಮರ್ ಪಾತ್ರಗಳನ್ನು ಮಾಡದೆ ಮೆಚ್ಚುಗೆ ಪಡೆದವರು ಅವರು. ಅವರ ನಟನೆಯ 'ಅಮರನ್' ಸಿನಿಮಾ ಇಂದು (ಅಕ್ಟೋಬರ್ 31) ರಿಲೀಸ್ ಆಗಲಿದೆ. ಈ ಚಿತ್ರದಲ್ಲಿ ಶಿವಕಾರ್ತಿಕೇಯ ಅವರ ಜೊತೆ ಸಾಯಿ ಪಲ್ಲವಿ ಜೊತೆಯಾಗಿದ್ದಾರೆ. ಈ ಸಿನಿಮಾದ ಆಡಿಯೋ ಲಾಂಚ್ ಕಾರ್ಯಕ್ರಮದಲ್ಲಿ ಮಣಿರತ್ನಂ ಅವರು ಅತಿಥಿಯಾಗಿ ಬಂದಿದ್ದರು. ಅವರು ಸಾಯಿ ಪಲ್ಲವಿಯನ್ನು ಹೊಗಳಿದ್ದಾರೆ.



'ಸಾಯಿ ಪಲ್ಲವಿ ಅವರು ಮಾಡುವ ಪಾತ್ರಗಳು ನೈಜವಾಗಿ ಇರುತ್ತವೆ. ಈ ಸಿನಿಮಾದಲ್ಲಿ ಚೆನ್ನಾಗಿಯೇ ಮಾಡಿರುತ್ತಾರೆ ಎಂದು ನನಗೆ ಅನಿಸುತ್ತಿದೆ. ನಾನು ಅವರ ದೊಡ್ಡ ಅಭಿಮಾನಿ' ಎಂದು ಮಣಿರತ್ನಂ ಅವರು ಹೇಳುತ್ತಿದ್ದಂತೆ ಸಾಯಿ ಪಲ್ಲವಿ ಅವರು ನಾಚಿ ನೀರಾದರು. ಸಾಯಿ ಪಲ್ಲವಿ ಜೊತೆ ಕೆಲಸ ಮಾಡಬೇಕು ಎಂದು ಅನೇಕ ಯುವ ನಿರ್ದೇಶಕರು ಅಂದುಕೊಳ್ಳೋದು ಸಹಜ. ಪಲ್ಲವಿ ಕೇವಲ ಯುವ ನಿರ್ದೇಶಕರಿಗೆ ಮಾತ್ರವಲ್ಲ ಹಿರಿಯ ನಿರ್ದೇಶಕರ ಫೇವರಿಟ್ ಕೂಡ ಹೌದು ಅನ್ನೋದು ಸಾಬೀತಾಗಿದೆ. 'ನಾನು ಮುಂದೊಂದು ದಿನ ನಿಮ್ಮ ಜೊತೆ ಕೆಲಸ ಮಾಡಬೇಕು' ಎಂದು ಅವರು ಹೇಳಿದ್ದಾರೆ.

ಸಾಯಿ ಪಲ್ಲವಿ ಅವರು ಮಣಿರತ್ನಂ ಅವರಿಂದ ಈ ರೀತಿಯ ಮಾತುಗಳನ್ನು ನಿರೀಕ್ಷಿಸಿರಲೇ ಇಲ್ಲ. ಹೀಗಾಗಿ ಅವರು ಕರಗಿ ನಾಚಿ ನೀರಾದರು. ಅವರು ಮಣಿರತ್ನಂ ಅವರ ಮಾತಿಗೆ ಧನ್ಯವಾದ ಹೇಳಿದರು. 'ಅಮರನ್' ಚಿತ್ರವು ಮೇಜರ್ ಮುಕುಂದ್ ವರದರಾಜನ್ ಅವರ ಜೀವನ ಆಧರಿಸಿದೆ. ಶಿವಕಾರ್ತಿಕೇಯ ಅವರು ಮುಕುಂದ್ ಪಾತ್ರ ಮಾಡಿದ್ದಾರೆ. ಸಾಯಿ ಪಲ್ಲವಿ ಅವರು ಮುಕುಂದ್ ಪತ್ನಿ ಇಂದು ರೆಬೆಕಾ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರವನ್ನು ರಾಜ್ ?ಕುಮಾರ್ ಪೆರಿಯಸ್ವಾಮಿ ನಿರ್ದೇಶನ ಮಾಡಿದ್ದಾರೆ. ಈ ಚಿತ್ರವು ಶಿವ ಅರೂರ್ ಹಾಗೂ ರಾಹುಲ್ ಸಿಂಘ ಬರೆದ ಪುಸ್ತಕವನ್ನು ಆಧರಿಸಿದೆ. ಮಣಿರತ್ನಂ ಅವರು ಸದ್ಯ 'ಥಗ್ ಲೈಫ್' ಚಿತ್ರದ ಕೆಲಸದಲ್ಲಿ ಬ್ಯುಸಿ ಇದ್ದಾರೆ. ಈ ಚಿತ್ರದಲ್ಲಿ ಕಮಲ್ ಹಾಸನ್ ಹೀರೋ. ಮಣಿರತ್ನಂ ಸಿನಿಮಾಗಳ ಬಗ್ಗೆ ಅವರ ಕೆಲಸಗಳ ಬಗ್ಗೆ ಹೊಸದಾಗಿ ಹೇಳಬೇಕಿಲ್ಲ. ಅವರ ಸಿನಿಮಾಗಳಲ್ಲಿ ಅದ್ದೂರಿತನ ಹೆಚ್ಚೇ ಇರುತ್ತದೆ.



ಜಯಶ್ರೀ.ಬಿ.ಆರ್

ಖ್ಯಾತ ಜ್ಯೋತಿಷಿ

ದೂರವಾಣಿ-9964739507

www.jyotishyavaastu.com

## ರಾಶಿ ಭವಿಷ್ಯ

**ಮೇಷ:** ವ್ಯವಹಾರ ಕ್ಷೇತ್ರದಲ್ಲಿ ಅನುಕೂಲ, ಅಧಿಕ ಧನ ಸಂಪಾದನೆ, ರಿಯಲ್ ಎಸ್ಟೇಟ್‌ನವರಿಗೆ ಅನುಕೂಲ, ಅತಿಯಾದ ಕೋಪ ಸಂಕಟ

**ವೃಷಭ:** ಧನ ನಷ್ಟ,ಮಾನ ಅಪಮಾನಗಳಿಗೆ ಗುರಿಯಾಗುವಿರಿ, ಸಾಲದ ಸುಳಿಗೆ ಸಿಲುಕುವಿರಿ.

**ಮಿಥುನ:** ಸಾಲದ ಚಿಂತೆ, ಸಾಲ ಬೇಡುವ ಸನ್ನಿವೇಶ, ಅನಾರೋಗ್ಯ ಸಮಸ್ಯೆ.

**ಕಟಕ:** ಮಕ್ಕಳಿಂದ ನಷ್ಟ, ಸೇವಕರಿಂದ ಕಿರಿಕಿರಿ, ನಿದ್ರಾಭಂಗ, ಮಕ್ಕಳಿಗಾಗಿ ದೂರ ಪ್ರಯಾಣ.

**ಸಿಂಹ:** ಧನಾಗಮನ ಮತ್ತು ಲಾಭ, ಕೆಲಸ ಕಾರ್ಯಗಳಲ್ಲಿ ಜಯ, ಆರ್ಥಿಕ ನಷ್ಟ ಮತ್ತು ಮೋಸ.

**ಕನ್ಯಾ:** ಆಸ್ಪತ್ರೆಗೆ ದಾಖಲಾಗುವ ಸಂದರ್ಭ, ಉದ್ಯೋಗ ಒತ್ತಡಗಳಿಂದ ನಿದ್ರಾಭಂಗ, ಸ್ನೇಹಿತರಿಂದ ತೊಂದರೆ, ದಾಂಪತ್ಯದಲ್ಲಿ ಬಿರುಕು.

**ತುಲಾ:** ಸಂಗಾತಿಯಿಂದ ಧನಾಗಮನ, ತಂದೆಯೊಡನೆ ಕಿರಿಕಿರಿ, ಅನಿರೀಕ್ಷಿತ ಘಟನೆಯಿಂದ ನಷ್ಟ.

**ವೃಶ್ಚಿಕ:** ಪ್ರಯಾಣದಿಂದ ಅನುಕೂಲ, ಆಕಸ್ಮಿಕ ಅಧಿಕ ಧನಾಗಮನ, ಆರೋಗ್ಯದಲ್ಲಿ ವ್ಯತ್ಯಾಸ.

**ಧನಸು:** ಚಿನ್ನ ವ್ಯವಹಾರಸ್ಥರಿಗೆ ಅನುಕೂಲ, ಅಧಿಕ ನಷ್ಟ, ಉದ್ಯೋಗ ಸ್ಥಳದಲ್ಲಿ ಒತ್ತಡ ,ಅನಿರೀಕ್ಷಿತ ತಪ್ಪು.

**ಮಕರ:** ಪಿತ್ರಾರ್ಜಿತ ಆಸ್ತಿ ಮೇಲೆ ಸಾಲ, ಮಿತ್ರರಿಂದ ಆರ್ಥಿಕ ಸಹಾಯ, ಆರೋಗ್ಯದಲ್ಲಿ ವ್ಯತ್ಯಾಸ ,ದಾಂಪತ್ಯದಲ್ಲಿ ಕಲಹ.

**ಕುಂಭ:** ಆರೋಗ್ಯದಲ್ಲಿ ಏರುಪೇರು, ಗಂಡು ಮಕ್ಕಳಿಂದ ಧನಾಗಮನ, ಶತ್ರುಗಳಿಂದ ತೊಂದರೆ, ಆಯುಷ್ಯಕ್ಕೆ ಕುತ್ತು.

**ಮೀನ:** ಸ್ಥಿರಾಸ್ಥಿಯಿಂದ ಧನಾಗಮನ, ಆರ್ಥಿಕ ಸಂಕಷ್ಟಗಳು ಬಗೆಹರಿಯುವುದು, ಸೇವಾವೃತ್ತಿ ಉದ್ಯೋಗಗಳು ದೊರಕುವುದು, ಆರೋಗ್ಯ ಸಮಸ್ಯೆಗಳು ಬಾಧಿಸುವುದು.

## ವಿಶ್ವನಗರಗಳ ದಿನ




ಪ್ರತಿ ವರ್ಷ ಅಕ್ಟೋಬರ್ 31 ರಂದು ವಿಶ್ವ ನಗರಗಳ ದಿನವನ್ನು ಆಚರಿಸಲಾಗುತ್ತದೆ. ಜಾಗತಿಕ ನಗರೀಕರಣದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಸುಸ್ಥಿರ ನಗರಾಭಿವೃದ್ಧಿಯಲ್ಲಿ ಜಾಗತಿಕ ಸಹಕಾರಕ್ಕಾಗಿ ಒತ್ತಾಯಿಸುವುದು ದಿನದ ಗುರಿಯಾಗಿದೆ. ವಿಶ್ವ ನಗರಗಳ ದಿನವು ಗ.ಓ. ನ ಸುಸ್ಥಿರ ಅಭಿವೃದ್ಧಿ ಗುರಿ 11, ಸುಸ್ಥಿರ ನಗರಗಳು ಮತ್ತು ಸಮುದಾಯಗಳೊಂದಿಗೆ ಹೊಂದಿಕೊಳ್ಳುತ್ತದೆ - ಇದು ನಗರ ಅಭಿವೃದ್ಧಿಯನ್ನು ಸಮರ್ಥವಾಗಿ ವ್ಯವಹರಿಸುತ್ತದೆ. ವಿಶ್ವ ನಗರಗಳ ದಿನವನ್ನು 2013 ರಲ್ಲಿ ಯುಎನ್ ಘೋಷಿಸಿತು ಮತ್ತು ಅಂದಿನಿಂದ ಪ್ರತಿ ವರ್ಷ ಆಚರಿಸಲಾಗುತ್ತದೆ. ಈ ದಿನವು ಪ್ರಪಂಚದ ದೊಡ್ಡ ನಗರಗಳಲ್ಲಿನ ಅಸಮಾನತೆಗಳನ್ನು ಬೆಳಕಿಗೆ ತರುತ್ತದೆ ಮತ್ತು ಸಮಾನತೆ ಮತ್ತು ಸೇವೆಗಳು ಮತ್ತು ಅವಕಾಶಗಳಿಗೆ ಪ್ರವೇಶವನ್ನು ಒಳಗೊಂಡಂತೆ ಹೆಚ್ಚಿನ ಸಾಮಾಜಿಕ ಸೇರ್ಪಡೆಗಾಗಿ ತಳ್ಳುತ್ತದೆ. 7500 ಃ.ಅ. ಸುಮಾರು ಮೆಸೊಪಟ್ಯಾಮಿಯಾ ಎಂದು ಕರೆಯಲ್ಪಡುವ ಭೂಮಿಯಲ್ಲಿ ಟೈಗ್ರಿಸ್ ಮತ್ತು ಯೂಫ್ರಟಿಸ್ ನದಿಗಳ ನಡುವಿನ ಫಲವತ್ತಾದ ಅರ್ಧಚಂದ್ರಾಕೃತಿಯಲ್ಲಿ ಮೊದಲ ನಗರಗಳು ಕಾಣಿಸಿಕೊಂಡವು. ಈ ನಗರಗಳಲ್ಲಿ ಎರಿಡು, ಉರ್ ಮತ್ತು ಉರುಕ್ ಸೇರಿವೆ. ಶೀಘ್ರದಲ್ಲೇ, ಈಜಿಪ್ಟ್ನ ನೈಲ್ ನದಿ, ಭಾರತದಲ್ಲಿ ಸಿಂಧೂ ನದಿ ಮತ್ತು ಚೀನಾದ ಹುವಾಂಗ್ ಹೀ ನದಿಯ ದಡದಲ್ಲಿ ನಗರಗಳು ರೂಪುಗೊಂಡವು. ನಗರಗಳು ಫಲವತ್ತಾದ ಮಣ್ಣನ್ನು ಹೊಂದಿರುವ ಸ್ಥಳಗಳಲ್ಲಿ ಬೆಳೆದವು, ಆರಂಭಿಕ ಮಾನವರು ಹೆಚ್ಚು ಅಲೆಮಾರಿ ಜೀವನಶೈಲಿಯನ್ನು ತ್ಯಜಿಸಲು ಅವಕಾಶ ಮಾಡಿಕೊಟ್ಟರು. ನಂತರದ ಸಹಸ್ರಮಾನಗಳವರೆಗೆ, ಪ್ರಪಂಚದಾದ್ಯಂತ ನಗರಗಳು ಏರುತ್ತಲೇ ಇದ್ದವು. ಮೆಸೊಪಟ್ಯಾಮಿಯಾ ಕಲ್ಲುಮಣ್ಣುಗಳಿಗೆ ತಿರುಗಿತು, ಸಿಂಧೂ ಕಣಿವೆಯು ನಿರ್ಜನವಾಗಿತ್ತು ಮತ್ತು ರೋಮ್ ಏರಿತು ಮತ್ತು ಕುಸಿಯಿತು. ಆದರೆ ನಗರದ ಸಂಸ್ಥೆಯು ಎಂದಿಗೂ ಹೋಗಲಿಲ್ಲ. ನಗರಗಳು ಇತಿಹಾಸದುದ್ದಕ್ಕೂ ವ್ಯಾಪಾರ, ಧರ್ಮ, ಸಂಸ್ಕೃತಿ ಮತ್ತು ಶಿಕ್ಷಣದ ಕೇಂದ್ರಗಳಾಗಿವೆ. ಆದಾಗ್ಯೂ, ಇಂದು ನಗರ ವಸಾಹತುಗಳ ಸಂಪೂರ್ಣ ಪ್ರಮಾಣವು ಕೈಗಾರಿಕಾ ಕ್ರಾಂತಿಯ ನಂತರ ಮಾತ್ರ ಸಾಧ್ಯವಾಯಿತು. ಕ್ರಾಂತಿಯು ಕಾರ್ಖಾನೆಗಳಲ್ಲಿ ಉದ್ಯೋಗಾವಕಾಶಗಳ ಹುಡುಕಾಟದಲ್ಲಿ ಜನರನ್ನು ನಗರಗಳಿಗೆ ಓಡಿಸಿತು. ನಗರ ಜನಸಂಖ್ಯೆಯ ಬೆಳವಣಿಗೆಯು ತಾಂತ್ರಿಕ ಪ್ರಗತಿಯಿಂದ ಬೆಂಬಲಿತವಾಗಿದೆ - ಇವುಗಳಲ್ಲಿ ಉಕ್ಕು, ವಿದ್ಯುತ್ ವಹನ, ಎಲಿವೇಟರ್ಗಳು ಇತ್ಯಾದಿಗಳ ಆವಿಷ್ಕಾರಗಳು ಸೇರಿವೆ. ಪ್ರಪಂಚದ ಅರ್ಧದಷ್ಟು ಜನಸಂಖ್ಯೆಯು ಈಗ ನಗರಗಳಲ್ಲಿ ವಾಸಿಸುತ್ತಿದೆ ಮತ್ತು ಈ ಜನರಿಗೆ ಸಮರ್ಥನೀಯವಾಗಿ ಹೇಗೆ ಅರಿವು ಮೂಡಿಸುವುದು ಎಂದಿಗಿಂತಲೂ ಹೆಚ್ಚು ಮುಖ್ಯವಾಗಿದೆ. ನಗರಗಳಲ್ಲಿ ಸಹ ಅಸ್ತಿತ್ವದಲ್ಲಿದೆ. 2030 ರ ವೇಳೆಗೆ 41 ಮೆಗಾಸಿಟಿಗಳು - 10 ದಶಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳು - ಗ.ಓ. ಭಾರತವು ತನ್ನ ಐದು ಮೆಗಾಸಿಟಿಗಳನ್ನು ಹೊಂದಿದ್ದು, ಏಳು ನಗರಗಳನ್ನು ಹೊಂದುವ ನಿರೀಕ್ಷೆಯಿದೆ, ಮೆಗಾಸಿಟಿಗಳು ಹುಟ್ಟುವ ಇತರ ಸ್ಥಳಗಳು ಡೆಮಾಕ್ರಟಿಕ್ ಪೀಪಲ್ಸ್ ರಿಪಬ್ಲಿಕ್ ಆಫ್ ಕಾಂಗೋದ ರಾಜಧಾನಿಯಾದ ಕಿನ್ಶಾಸಾವನ್ನು ಒಳಗೊಂಡಿವೆ.

ಸಂಜೆ ಮುಗಿಲು
ಗುರುವಾರ
31.10.2024





## ಬಾಹ್ಯಾಕಾಶದಿಂದಲೇ ದೀಪಾವಳಿ ಶುಭಾಶಯ ಕೋರಿದ ಸುನಿತಾ ವಿಲಿಯಮ್ಸ್

**ದೆಹಲಿ:** ಜೂನ್ ಮೊದಲ ವಾರದಲ್ಲಿ ಬಾಹ್ಯಾಕಾಶಕ್ಕೆ ತೆರಳಿ ಇದುವರೆಗೂ ಭೂಮಿಗೆ ವಾಪಸ್ಸಾಗಲು ಸಾಧ್ಯವಾಗದೆ, ಸದ್ಯ ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿರುವ ಗಗನಯಾನಿ ಸುನೀತಾ ವಿಲಿಯಮ್ಸ್, ಇದೀಗ ಅಲ್ಲಿಂದಲೇ ದೀಪಾವಳಿ ಹಬ್ಬಕ್ಕೆ ವಿಡಿಯೋ ಸಂದೇಶ ಕಳುಹಿಸಿದ್ದಾರೆ.

ಈ ವಿಡಿಯೋದಲ್ಲಿ ಹೇಳಿರುವಂತೆ ಸದ್ಯ ಭೂಮಿಯಿಂದ ಸುಮಾರು 260 ಮೈಲುಗಳಷ್ಟು ಎತ್ತರದಲ್ಲಿ ಇದನ್ನು ರೆಕಾರ್ಡ್ ಮಾಡಲಾಗಿದ್ದು, ಭಾರತೀಯ ಮೂಲದ ಗಗನಯಾತ್ರಿ ಸುನೀತಾ ವಿಲಿಯಮ್ಸ್ ದೀಪಾವಳಿ ಹಬ್ಬ ಮತ್ತು ಅದರ ಸಾಂಸ್ಕೃತಿಕ ಮಹತ್ವದ ಬಗ್ಗೆ ಮಾತನಾಡಿದ್ದಾರೆ. ಈ ವಿಡಿಯೋದಲ್ಲಿ ಬಹಳ ಸಂತಸದಿಂದಲೇ ಕಾಣಿಸಿಕೊಂಡಿರುವ ಸುನೀತಾ ವಿಲಿಯಮ್ಸ್ ಬಾಹ್ಯಾಕಾಶದಿಂದ ದೀಪಾವಳಿಯನ್ನು ವೀಕ್ಷಿಸುವ ಅನನ್ಯ ಅವಕಾಶದ ಬಗ್ಗೆ ತಮಗೆ ಬಹಳ ಸಂತೋಷ ಇರುವುದಾಗಿ ಹೇಳಿಕೊಂಡಿದ್ದು, ಅಮೆರಿಕಾ ಮತ್ತು ಭಾರತೀಯರಿಗೆ ಹಬ್ಬದ ಶುಭಾಶಯ ತಿಳಿಸಿದ್ದಾರೆ.

## ಭೀಕರ ಪ್ರವಾಹಕ್ಕೆ 95 ಮಂದಿ ಬಲಿ

**ಸ್ಪೇನ್:** ಸ್ಪೇನ್‌ನಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದಾಗಿ ಕನಿಷ್ಠ 95 ಮಂದಿ ಮೃತಪಟ್ಟಿದ್ದು, ಇನ್ನೂ ಕಾಣೆಯಾಗಿರುವ ಇತರರಿಗಾಗಿ ತುರ್ತು ಸ್ಪಂದಕರು ಹುಡುಕಾಟ ನಡೆಸುತ್ತಿದ್ದಾರೆ ಎಂದು ಅಧಿಕಾರಿಗಳನ್ನು ಉಲ್ಲೇಖಿಸಿ ಸಿಎನ್ ಎನ್ ಬುಧವಾರ ವರದಿ ಮಾಡಿದೆ

ವೆಲೆನ್ಸಿಯಾದಲ್ಲಿ 92 ಮಂದಿ ಮೃತಪಟ್ಟಿದ್ದಾರೆ ಎಂದು ಸ್ಪೇನ್ ನ ಪ್ರಾದೇಶಿಕ ನೀತಿ ಮತ್ತು ಪ್ರಜಾಸತ್ತಾತ್ಮಕ ಮೆಮೊರಿ ಸಚಿವ ಏಂಜೆಲ್ ವಿಕ್ಟರ್ ಟೊರೆಸ್ ದೃಢಪಡಿಸಿದ್ದಾರೆ ಎಂದು ಸಿಎನ್ ಎನ್ ವರದಿ ಮಾಡಿದೆ.

ಇದಲ್ಲದೆ, ಕ್ಯಾಸ್ಟೈಲ್-ಲಾ ಮಂಚದಲ್ಲಿ ಎರಡು ಮತ್ತು ಅಂಡಲೂಸಿಯಾದಲ್ಲಿ ಒಂದು ಸಾವು ಸಂಭವಿಸಿದೆ.

ವೆಲೆನ್ಸಿಯಾದ ಪೈಪೋರ್ಟಾ ಪಟ್ಟಣದಲ್ಲಿ, ನಿವೃತ್ತಿ ಗೃಹದ ಆರು ನಿವಾಸಿಗಳು ಸೇರಿದಂತೆ 40 ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಮೇಯರ್ ಮಾರಿಬೆಲ್ ಅಲ್ಬಾಲಾಟ್ ಹೇಳಿದ್ದಾರೆ ಎಂದು ಸ್ಪ್ಯಾನಿಷ್ ರಾಜ್ಯ ಸುದ್ದಿ ಸಂಸ್ಥೆ ಇಎಫ್‌ಇ ಉಲ್ಲೇಖಿಸಿ ಸಿಎನ್‌ಎನ್ ವರದಿ ಮಾಡಿದೆ.

ದಕ್ಷಿಣ ಮತ್ತು ಪೂರ್ವ ಸ್ಪೇನ್ ನ ವಿವಿಧ ಪ್ರದೇಶಗಳಲ್ಲಿ ಮಂಗಳವಾರ (ಸ್ಥಳೀಯ ಸಮಯ) ಕೆಲವೇ ಗಂಟೆಗಳಲ್ಲಿ 12 ಇಂಚುಗಳಷ್ಟು ಮಳೆಯಾಗಿದೆ, ಇದು 28 ವರ್ಷಗಳಲ್ಲಿ ವೆಲೆನ್ಸಿಯಾ ಕಂಡ ಅತಿ ಹೆಚ್ಚು ಮಳೆಯಾಗಿದೆ ಎಂದು ರಾಜ್ಯ ಹವಾಮಾನ ಸಂಸ್ಥೆ ಎಇಎಂಇಟಿ ತಿಳಿಸಿದೆ.

ಹೆಚ್ಚಿನ ಹೆದ್ದಾರಿಗಳು ಹಾದುಹೋಗಲು ಅಸಾಧ್ಯವಾದ ಕಾರಣ ಈ ಪ್ರದೇಶವು ಅವ್ಯವಸ್ಥೆಗೆ ಇಳಿಯಿತು, ಬಿಟ್ಟುಹೋದ ವಾಹನಗಳು ಪ್ರವಾಹದಲ್ಲಿ ಕೊಚ್ಚಿಹೋದವು.

ಸಿಎನ್‌ಎನ್ ಪ್ರಕಾರ, ರಕ್ಷಣಾ ಸಂಸ್ಥೆಗಳ ವೀಡಿಯೊಗಳು ಬೀದಿಗಳು ಮುಳುಗಿರುವುದನ್ನು, ಛಾವಣಿಗಳ ಮೇಲೆ ಸಿಲುಕಿರುವ ಜನರನ್ನು ಮತ್ತು ಕಾರುಗಳನ್ನು ಪಲ್ಟಿಯಾಗಿರುವುದನ್ನು ತೋರಿಸುತ್ತವೆ.



## ದೀಪಾವಳಿ ಕಾರ್ಯಕ್ರಮ ರದುಗೊಳಿಸಿದ ಕೆನಡಾದ ವಿರೋಧ ಪಕ್ಷದ ನಾಯಕ



**ಒಟ್ಟಾವ:** ಭಾರತದೊಂದಿಗೆ ರಾಜತಾಂತ್ರಿಕ ಬಿಕ್ಕಟ್ಟಿನ ನಡುವೆ, ಕೆನಡಾದ ವಿರೋಧ ಪಕ್ಷದ ನಾಯಕರ ಕಚೇರಿಯು ಭಾರತೀಯ-ಕೆನಡಿಯನ್ ಸಮುದಾಯಕ್ಕೆ ಸಂಸತ್ ಭವನದಲ್ಲಿ ವಾರ್ಷಿಕ ದೀಪಾವಳಿ ಕಾರ್ಯಕ್ರಮವನ್ನು ರದ್ದುಗೊಳಿಸಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ಅಕ್ಟೋಬರ್ 30ರಂದು (ಬುಧವಾರ) ನಿಗದಿಯಾಗಿದ್ದ ಕಾರ್ಯಕ್ರಮವನ್ನು ರದ್ದುಗೊಳಿಸಿರುವುದಕ್ಕೆ ಯಾವುದೇ ಕಾರಣವನ್ನು ಒದಗಿಸಲಾಗಿಲ್ಲ ಎಂದು ಕಾರ್ಯಕ್ರಮದ ಆಯೋಜಕರಾದ 'ದಿ ಇಂಡಿಯನ್ ಡಯಾಸ್ಪೊರ ಗ್ರೂಪ್ ದಿ ಓವರ್ಸೀಸ್ ಫ್ರೆಂಡ್ಸ್ ಆಫ್ ಇಂಡಿಯಾ ಕೆನಡಾ(ಒಎಫ್‌ಐಸಿ) ಹೇಳಿದೆ. 'ಕಳೆದ 23 ವರ್ಷದಿಂದ ಆಯೋಜಿಸಲಾಗುತ್ತಿದ್ದ ಕಾರ್ಯಕ್ರಮದಲ್ಲಿ ಬೌದ್ಧರು, ಸಿಖ್, ಜೈನ್, ಹಿಂದುಗಳು ಪಾಲ್ಗೊಳ್ಳುತ್ತಿದ್ದರು. ಆದರೆ ಕೆನಡಾ ಮತ್ತು ಭಾರತದ ನಡುವಿನ ಪ್ರಸ್ತುತ ರಾಜತಾಂತ್ರಿಕ ಪರಿಸ್ಥಿತಿಯಿಂದ ಪ್ರೇರೇಪಿಸಲ್ಪಟ್ಟ ಈ ಘಟನೆಯಿಂದ ನಮಗೆ ಅನ್ಯಾಯವಾಗಿದ್ದು ನಮ್ಮನ್ನು ಪ್ರತ್ಯೇಕಿಸಿರುವಂತೆ ಭಾಸವಾಗುತ್ತಿದೆ. ವಿರೋಧ ಪಕ್ಷದ ಮುಖಂಡ ಪಿಯರೆ ಪೊಯಿಲಿವ್ರೆ ಅವರು ಜನಾಂಗೀಯ ಪಕ್ಷಪಾತ' ತೋರುತ್ತಿದ್ದಾರೆ' ಎಂದು ಒಎಫ್‌ಐಸಿ ಅಧ್ಯಕ್ಷ ಶಿವ್ ಭಾಸ್ಕರ್ ಆರೋಪಿಸಿದ್ದಾರೆ.

## ಹೆಚ್ಚು ಮಕ್ಕಳ ಪಡೆದರೆ ತೆರಿಗೆ ವಿನಾಯಿತಿ!

**ಬೀಜಿಂಗ್:** ದೇಶದಲ್ಲಿ ಕುಸಿಯುತ್ತಿರುವ ಯುವಕರ ಜನಸಂಖ್ಯೆಯನ್ನು ಹೆಚ್ಚಳ ಮಾಡುವುದಕ್ಕಾಗಿ ಹೆಚ್ಚು ಮಕ್ಕಳನ್ನು ಹೊಂದುವ ದಂಪತಿಗಳಿಗೆ ತೆರಿಗೆ ಕಡಿತ, ಸಹಾಯಧನ ನೀಡುವ ಯೋಜನೆಯನ್ನು ಚೀನಾ ಘೋಷಣೆ ಮಾಡಿದೆ. ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ 13 ಕ್ರಮಗಳನ್ನು ಜಾರಿ ಮಾಡಿರುವ ಚೀನಾ, ಈ ಮೊದಲೇ ಮಕ್ಕಳ ಆರೈಕೆ ಕೇಂದ್ರಗಳ ಅಭಿವೃದ್ಧಿ, ಶಿಕ್ಷಣ ಗುಣಮಟ್ಟ ಹೆಚ್ಚಳ, ಮನೆ ಹಾಗೂ ಉದ್ಯೋಗ ಕೊಡುವುದಾಗಿಯೂ ಘೋಷಿಸಿತ್ತು. ಆದರೆ ಈ ಬಗ್ಗೆ ಚೀನಾ ಜನರಿಂದ ಹೆಚ್ಚಿನ ಪ್ರೋತ್ಸಾಹದಾಯಕ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಚೀನಾದಲ್ಲಿ ಸತತ 3ನೇ ವರ್ಷವೂ ಜನಸಂಖ್ಯೆ ಕುಸಿತದ ಹಾದಿಯಲ್ಲಿದ್ದು, 2023ರೊಂದರಲ್ಲೇ 14,808 ಶಿಶುವಿಹಾರ ಗಳು, 5,645 ಪ್ರಾಥಮಿಕ ಶಾಲೆಗಳು ಮುಚ್ಚಿದ್ದವು. ಹೀಗಾಗಿ ಚೀನಾ ಮಕ್ಕಳ ಜನನ ಪ್ರಮಾಣ ಏರಿಕೆ ಮಾಡುವ ಕ್ರಮಕ್ಕೆ ಮುಂದಾಗಿದೆ.






## ಪಿಎಲ್‌ಐ ಯೋಜನೆಯಡಿ ಮೆರಿಲ್ನ ಸುಧಾರಿತ ಉತ್ಪಾದನಾ ಸೌಲಭ್ಯಕ್ಕೆ ಮೋದಿ ಚಾಲನೆ

**ದೆಹಲಿ:** ಭಾರತದ ಪ್ರಮುಖ ಜಾಗತಿಕ ಮೆಡ್ ಟೆಕ್ ಕಂಪನಿಗಳಲ್ಲಿ ಒಂದಾದ ಮೆರಿಲ್ ಇಂದು ಮಹತ್ವದ ಮೈಲಿಗಲ್ಲನ್ನು ಆಚರಿಸಿದ್ದು, ಗೌರವಾನ್ವಿತ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಉತ್ಪಾದನೆ ಆಧಾರಿತ ಪ್ರೋತ್ಸಾಹಕ (ಪಿಎಲ್‌ಐ) ಯೋಜನೆಯಡಿ ತನ್ನ ಅತ್ಯಾಧುನಿಕ ಉತ್ಪಾದನಾ ಸೌಲಭ್ಯಗಳನ್ನು ವರ್ಚುವಲ್ ರೂಪದಲ್ಲಿ ಉದ್ಘಾಟಿಸಿದರು. ಗುಜರಾತಿನ ಗೌರವಾನ್ವಿತ ಡಾ. ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಭೂಪೇಂದ್ರಭಾಯ್ ಪಟೇಲ್ ಅವರು ವಾಪಿಯಲ್ಲಿದ್ದ ಮೆರಿಲ್ ಪ್ರಧಾನ ಕಛೇರಿಯಲ್ಲಿ ಉಪಸ್ಥಿತರಿದ್ದರು.

ವೈದ್ಯಕೀಯ ಸಾಧನಗಳ ಪ್ರಮುಖ ತಯಾರಕ ಮತ್ತು ರಫ್ತುದಾರರಾದ ಮೆರಿಲ್, ಭಾರತದ ಜಾಗತಿಕ ಹೆಜ್ಜೆಗುರುತನ್ನು ಬಲಪಡಿಸಿದ್ದು, ಮೆಡ್ಟೆಕ್ನಲ್ಲಿ ರಾಷ್ಟ್ರದ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಉತ್ತಮ ಗುಣಮಟ್ಟದ ಮೇಕ್ ಇನ್ ಇಂಡಿಯಾ ಸಾಧನಗಳನ್ನು ಉತ್ಪಾದಿಸುವ ಮೂಲಕ, ಮೆರಿಲ್ ವಿದೇಶಿ ಆಮದುಗಳ ಮೇಲಿನ ಭಾರತದ ಅವಲಂಬನೆಯನ್ನು ಸಕ್ರಿಯವಾಗಿ ಕಡಿಮೆ ಮಾಡುತ್ತಿದೆ ಮತ್ತು ಆತ್ಮನಿರ್ಭರ ಭಾರತದ ದೃಷ್ಟಿಕೋನವನ್ನು ಬೆಂಬಲಿಸುತ್ತಿದೆ.

2024 ರ ವೈಬ್ರೆಂಟ್ ಗುಜರಾತ್ ಶೃಂಗಸಭೆಯಲ್ಲಿ, ಮೆರಿಲ್ ಗುಜರಾತ್ ಸರ್ಕಾರದೊಂದಿಗೆ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿತು, ವೈದ್ಯಕೀಯ ಸಾಧನಗಳ ಕ್ಷೇತ್ರದಲ್ಲಿ 910 ಕೋಟಿ ರೂ. ಇಲ್ಲಿಯವರೆಗೆ, ಮೆರಿಲ್ ?1,400 ಕೋಟಿಗೂ ಹೆಚ್ಚು ಹೂಡಿಕೆ ಮಾಡಿದ್ದು, ಇದು ಭಾರತದ ಮೆಡ್ಟೆಕ್ ಪರಿಸರ ವ್ಯವಸ್ಥೆಗೆ ತನ್ನ ಬದ್ಧತೆಯನ್ನು ಎತ್ತಿ ತೋರಿಸುತ್ತದೆ. ಈ ಹೂಡಿಕೆಯು 5,000 ಉದ್ಯೋಗಗಳನ್ನು ಸೃಷ್ಟಿಸುತ್ತದೆ ಮತ್ತು ನಿರ್ಣಾಯಕ ವೈದ್ಯಕೀಯ ಸಾಧನಗಳ ಆಮದನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ.ಪಿಎಲ್‌ಐ ಯೋಜನೆಯಡಿ, ಸ್ಟ್ರಕ್ಚರಲ್ ಹಾರ್ಟ್, ವಾಸ್ಕುಲರ್ ಇಂಟರ್ವೆನ್ಷನ್ಸ್, ಆರ್ಥೋಪೆಡಿಕ್ಸ್ ಮತ್ತು ಎಂಡೋ ಸರ್ಜರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆರಿಲ್ನ ನಾಲ್ಕು ಗ್ರೂಪ್ ಕಂಪನಿಗಳು ಸೇರಿವೆ, ಇದು ದೇಶೀಯವಾಗಿ ಅಗತ್ಯ ಸಾಧನಗಳ ಉತ್ಪಾದನೆಯನ್ನು ಬೆಂಬಲಿಸುತ್ತದೆ.

## ಮನೆಯಲ್ಲೇ ಜನನ, ಮರಣ ನೋಂದಣಿಗೆ ಕೇಂದ್ರದಿಂದ ಮೊಬೈಲ್ ಆ್ಯಪ್ ಬಿಡುಗಡೆ

**ನವದೆಹಲಿ:** ಜನನ ಮತ್ತು ಮರಣ ನೋಂದಣಿಗಳನ್ನು ಮನೆಯಿಂದಲೇ ಮಾಡಿಸಲು ಅನುಕೂಲವಾಗುವಂತೆ ಸಿವಿಲ್ ರಿಜಿಸ್ಟ್ರೇಷನ್ ಸಿಸ್ಟಂ(ಸಿ.ಆರ್.ಎಸ್.) ಮೊಬೈಲ್ ಆಯಪ್ ಅನ್ನು ಕೇಂದ್ರ ಗೃಹಸಚಿವ ಅಮಿತ್ ಶಾ ಬಿಡುಗಡೆ ಮಾಡಿದ್ದಾರೆ.

ಜನನ ಮತ್ತು ಮರಣಗಳನ್ನು ಎಲ್ಲಿಂದಲಾದರೂ ಯಾವುದೇ ಸಮಯದಲ್ಲಿ ಸಿ.ಆರ್.ಎಸ್.ಆಯಪ್ ಮೂಲಕ ನೋಂದಾಯಿಸಲುಬಹುದಾಗಿದೆ.



ನೋಂದಣಿಗೆ ಬಯಸುವವರು ಗೂಗಲ್ ಪ್ಲೇ ಸ್ಟೋರ್ ಗೆ ಹೋಗಿ ಸಿ.ಆರ್.ಎಸ್. ಆಯಪ್ ಡೌನ್ಲೋಡ್ ಮಾಡಿಕೊಳ್ಳಬೇಕು. ನಂತರ ಯೂಸರ್ ಐಡಿ ಪಾಸ್ವರ್ಡ್ ಆಗಲಿಸಬೇಕು ನೈಜತೆ ಪರಿಶೀಲನೆಗಾಗಿ ಮೊಬೈಲ್‌ಗೆ ಎಸ್ ಎಂಎಸ್ ಮೂಲಕ ಒಟಿಪಿ ಬರಲಿದ್ದು, ಅದನ್ನು ದೃಢೀಕರಿಸಬೇಕು.

ಮುಖಪುಟ ಪರದೆಯಲ್ಲಿ ಪ್ರೊಫೈಲ್, ಜನನ, ಸಾವು, ಶುಲ್ಕ ಆಯ್ಕೆಗಳು ಕಾಣಿಸುತ್ತದೆ. ಜನ್ಮ ದಿನಾಂಕವನ್ನು ನೋಂದಾಯಿಸಲು ಜನನ ಮತ್ತು ನಂತರ ಜನನ ನೋಂದಣಿ ಆಯ್ಕೆ ಮಾಡಿ ಮಗುವಿನ ಜನ್ಮ ದಿನಾಂಕ, ವಿಳಾಸ, ಕುಟುಂಬದ ಮಾಹಿತಿ ನಮೂದಿಸಿ ಅಗತ್ಯ ದಾಖಲೆ ಲಗತ್ತಿಸಬೇಕು.

ಮರಣ ನೋಂದಾಯಿಸಲು ಇದೇ ರೀತಿ ಪ್ರಕ್ರಿಯೆ ಮಾಡಿ ಮರಣ ದಿನಾಂಕ, ವಿಳಾಸ ಇತರೆ ಮಾಹಿತಿ ದಾಖಲಿಸಿ ಆನ್ಲೈನ್ ನಲ್ಲಿ ಶುಲ್ಕ ಪಾವತಿಸಿದರೆ ಜನನ ಅಥವಾ ಮರಣದ ಡಿಜಿಟಲ್ ಪ್ರಮಾಣ ಪತ್ರ ಬರಲಿದ್ದು, ಅದನ್ನು ಡೌನ್ಲೋಡ್ ಮಾಡಿ ಇಟ್ಟುಕೊಳ್ಳಬಹುದು.

## ಮಾಜಿ ಸಿಎಂ ಎಸ್.ಎಂ.ಕೃಷ್ಣಗೆ ಕರ್ನಾಟಕ ರತ್ನ ಗೌರವ ನೀಡುವಂತೆ ಆಗ್ರಹ!

**ಬೆಂಗಳೂರು:** ರಾಜ್ಯದ ಹಿರಿಯ ರಾಜಕಾರಣಿ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕು ಎಂಬ ಆಗ್ರಹ ಕೇಳಿಬರುತ್ತಿದೆ. ರಾಜ್ಯ ರಾಜಕಾರಣದಲ್ಲಿ ಅತಿ ಹಿರಿಯ ರಾಜಕಾರಣಿಗಳ ಪಟ್ಟಿಯಲ್ಲಿ ಎಸ್.ಎಂ.ಕೃಷ್ಣ ಕೂಡ ಒಬ್ಬರು. ರಾಜ್ಯ ರಾಜಕಾರಣ ಮಾತ್ರವಲ್ಲದೆ ರಾಷ್ಟ್ರ ರಾಜಕಾರಣದಲ್ಲೂ ಉನ್ನತ ಹುದ್ದೆಗಳನ್ನು ಎಸ್.ಎಂ.ಕೃಷ್ಣ ನಿಭಾಯಿಸಿದ್ದಾರೆ.

ಹೀಗಾಗಿ ಅವರ ಸೇವೆಯನ್ನು ಪರಿಗಣಿಸಿ ಕರ್ನಾಟಕ ರತ್ನ ಗೌರವ ನೀಡಬೇಕೆಂದು ಶಾಸಕ ದಿನೇಶ್ ಗೂಳಿಗೌಡ ಹಾಗೂ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಉಪಾಧ್ಯಕ್ಷರಾದ ಸ್ಟಾರ್ ಚಂದ್ರು ಸಿಎಂ ಸಿದ್ದರಾಮಯ್ಯ ಹಾಗೂ ಕನ್ನಡ ಮತ್ತು



ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮಂಡ್ಯದಿಂದ ತಮ್ಮ ರಾಜಕೀಯ ಜೀವನ ಆರಂಭಿಸಿದ ಎಸ್.ಎಂ.ಕೃಷ್ಣ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಮಂತ್ರಿಯಾಗಿ , ರಾಜ್ಯದ ಮುಖ್ಯಮಂತ್ರಿಯಾಗಿ, ರಾಜ್ಯಪಾಲರಾಗಿ ಹಲವು ಹುದ್ದೆಗಳನ್ನು ಅಲಂಕರಿಸಿದ ಹಿರಿಮೆ ಅವರಿಗಿದೆ. ಕನ್ನಡ ನಾಡಿನ ಅಭಿವೃದ್ಧಿಗೆ ಭದ್ರ ಭುನಾಧಿ ಕಲ್ಪಿಸಿ ಬೆಂಗಳೂರನ್ನು ಐಟಿ ಬಿಟಿ ರಾಜಧಾನಿ ಯಾಗಿಸಿ ನಾಡಿನ ಆರ್ಥಿಕ ಬೆಳವಣಿಗೆಗೆ ದಾರಿ ಮಾಡಿಕೊಟ್ಟ ಅವರಿಗೆ ಈ ಗೌರವ ಸಲ್ಲಬೇಕು ಎಂದು ಆಗ್ರಹಿಸಲಾಗಿದೆ. ಹೀಗಾಗಿ ನಿಮ್ಮ ಅವಧಿಯಲ್ಲಿ ಎಸ್.ಎಂ. ಕೃಷ್ಣ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿದರೆ ಪ್ರಶಸ್ತಿಯ ಮೌಲ್ಯವೂ ಹೆಚ್ಚಾಗಲಿದೆ. ಹೀಗಾಗಿ ದಯಮಾಡಿ ನಮ್ಮ ಮನವಿಯನ್ನು ಪರಿಗಣಿಸುವಂತೆ ಕೋರುತ್ತೇವೆ ಎಂದು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

## ಶ್ವೇತಭವನದಲಿ ದೀಪಾವಳಿ ಆಚರಿಸಿದ ಅಧ್ಯಕ್ಷ ಬೈಡನ್!

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಶ್ವೇತಭವನದಲ್ಲಿ ಸೋಮವಾರ 600ಕ್ಕೂ ಹೆಚ್ಚು ಅನಿವಾಸಿ ಭಾರತೀಯರೊಂದಿಗೆ ದೀಪಾವಳಿ ಆಚರಿಸಿದರು. ಈ ಸಂದರ್ಭದಲ್ಲಿ ಅಮೆರಿಕದ ಸಂಸತ್ ಸದಸ್ಯರು, ವಿವಿಧ ಕಂಪನಿಗಳ ಸಿಇಒಗಳು, ಭಾರತೀಯ ಅಮೆರಿಕನ್ ಸಮುದಾಯದ ಪ್ರಮುಖರು ಪಾಲ್ಗೊಂಡಿದ್ದರು. ಇದೇ ವೇಳೆ ಮಾತನಾಡಿದ ಬೈಡೆನ್, ''ಅಧ್ಯಕ್ಷನಾಗಿ ಶ್ವೇತಭವನದಲ್ಲಿ ಅತಿದೊಡ್ಡ ದೀಪಾವಳಿ ಆಯೋಜನೆ ಮಾಡಿದ್ದಕ್ಕೆ ನನಗೆ ಹೆಮ್ಮೆಯಿದೆ. ಅಮೆರಿಕದಂತಹ ಆಡಳಿತವನ್ನು ನಡೆಸಲು ಬದ್ಧತೆ ಬಗ್ಗೆ ಗೌರವ ಇದೆ' ಎಂದರು. ನ.5ರ ಚುನಾವಣೆ ಪ್ರಚಾರದ ಹಿನ್ನೆಲೆಯಲ್ಲಿ ಭಾರತ ಮೂಲದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಶ್ವೇತ ಭವನದಲ್ಲಿ ನಡೆದ ದೀಪಾವಳಿ ಕಾರ್ಯಕ್ರಮದಲ್ಲಿ ಭಾಗವಹಿಸಿರಲಿಲ್ಲ.



## ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾದರೆ ತೈವಾನ್ 'ತಿರಸ್ಕೃತ' ಮಗು ಆಗಬಹುದು: ಚೀನಾ

**ಬೀಜಿಂಗ್:** ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷನಾದರೆ ತೈವಾನ್ ಅನ್ನು ಖಂಡಿತಾ ತಿರಸ್ಕರಿಸುತ್ತಾರೆ. ಆಗ ತೈವಾನ್ ಅಮೆರಿಕಕ್ಕೆ ಇಷ್ಟವಿಲ್ಲದ 'ತಿರಸ್ಕೃತ ಮಗು' ಆಗುತ್ತದೆ ಎಂದು ಚೀನಾ ಸರಕಾರ ಬುಧವಾರ ಹೇಳಿದೆ.



ರಿಪಬ್ಲಿಕನ್ ಅಭ್ಯರ್ಥಿಯಾಗಿರುವ ಟ್ರಂಪ್ ಹಲವು ಪ್ರಚಾರ ಸಭೆಗಳಲ್ಲಿ 'ಚೀನಾ ಹಕ್ಕು ಸಾಧಿಸುತ್ತಿರುವ ತೈವಾನ್ ನ ರಕ್ಷಣೆಗಾಗಿ ಆ ದ್ವೀಪವು ಅಮೆರಿಕಕ್ಕೆ ಶುಲ್ಕ ಪಾವತಿಸಬೇಕು' ಎಂದು ಪ್ರತಿಪಾದಿಸುತ್ತಾ ಬಂದಿದ್ದಾರೆ. ಅಲ್ಲದೆ ತೈವಾನ್ ಅಮೆರಿಕದ ಸೆಮಿಕಂಡಕ್ಟರ್ ವ್ಯಾಪಾರವನ್ನು ಕದಿಯುತ್ತಿದೆ ಎಂದು ಆರೋಪಿಸಿದ್ದಾರೆ.

ಚೀನಾವು ತೈವಾನ್ ಅನ್ನು ವಶಕ್ಕೆ ಪಡೆದರೆ ಚೀನಾದ ಮೇಲೆ ಹೆಚ್ಚುವರಿ, ಬೃಹತ್ ಸುಂಕಗಳನ್ನು ವಿಧಿಸುವುದಾಗಿ ಕಳೆದ ತಿಂಗಳು ಟ್ರಂಪ್ ಹೇಳಿದ್ದರು. ಈ ಹೇಳಿಕೆಯ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ತೈವಾನ್ ವ್ಯವಹಾರಗಳ ಇಲಾಖೆಯ ವಕ್ತಾರ ಝು ಫೆಂಗ್ಲಿಯಾನ್ 'ತೈವಾನ್ ನ ಜನತೆ ಅಮೆರಿಕದ ನೀತಿಯ ಬಗ್ಗೆ ಸ್ಪಷ್ಟ ತಿಳುವಳಿಕೆಯನ್ನು ಹೊಂದಿದ್ದಾರೆ. ಅಮೆರಿಕವು ತೈವಾನನ್ನು ರಕ್ಷಿಸುತ್ತದೆಯೇ ಅಥವಾ ಹಾನಿ ಮಾಡುತ್ತದೆಯೇ ಎಂಬ ಪ್ರಶ್ನೆ ಇಲ್ಲಿ ಮೂಡುತ್ತದೆ. ಅದೇನೇ ಇರಲಿ, ತೈವಾನ್ ನ ನಮ್ಮ ಬಹುತೇಕ ದೇಶವಾಸಿಗಳು ಈಗಾಗಲೇ ತರ್ಕಬದ್ಧ ಯೋಚನೆ ಮಾಡಿದ್ದಾರೆ ಮತ್ತು ಅಮೆರಿಕ ಯಾವತ್ತೂ 'ಅಮೆರಿಕ ಮೊದಲು' ಎಂಬ ನೀತಿಯನ್ನೇ ಅನುಸರಿಸುತ್ತದೆ. ಅಮೆರಿಕದ ಹಿತಾಸಕ್ತಿಗಳಿಗೆ ಮೊದಲ ಆದ್ಯತೆ ನೀಡುತ್ತದೆ ಎಂಬುದನ್ನು ಅರಿತಿದ್ದಾರೆ. ತೈವಾನ್ ಅನ್ನು ದಾಳವಾಗಿ ಬಳಸಿಕೊಳ್ಳುತ್ತಿರುವ ಅಮೆರಿಕ, ತನಗೆ ಲಾಭವಾದರೆ ಯಾವ ಸಮಯದಲ್ಲೂ ತೈವಾನ್ ಅನ್ನು ಕೈಬಿಡಲಿದೆ. ಆಗ ತೈವಾನ್ 'ತಿರಸ್ಕೃತ ಮಗು'ವಾಗಲಿದೆ ಎಂದಿದ್ದಾರೆ.

## ಕಮಲಾ ಹ್ಯಾರಿಸ್ ಗೆಲುವಿಗಾಗಿ ಭಾರತದಲ್ಲಿ ವಿಶೇಷ ಪೂಜೆ

**ತೆಲಂಗಾಣ:** ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಗೆಲುವಿಗಾಗಿ ತೆಲಂಗಾಣದ ಭದ್ರಾದ್ರಿ ಕೊತಗುಡೆಂ ಜಿಲ್ಲೆಯ ಪಲ್ವಂಚದಲ್ಲಿರುವ ಶ್ಯಾಮಲಾ ಗೋಪಾಲನ್ ಎಜುಕೇಶನಲ್ ಫೌಂಡೇಶನ್ ಪ್ರಧಾನ ಕಚೇರಿಯಲ್ಲಿ 11 ದಿನಗಳ ಕಾಲ ನಡೆದ ಮಹಾ ಯಜ್ಞ ಇಂದು ಮುಕ್ತಾಯಗೊಂಡಿದೆ.



ಡಾ. ಶ್ಯಾಮಲಾ ಗೋಪಾಲನ್ ಬಯೋಮೆಡಿಕಲ್ ವಿಜ್ಞಾನಿ ಮತ್ತು ಕಮಲಾ ಹ್ಯಾರಿಸ್ ಅವರ ತಾಯಿಯಾಗಿದ್ದರೆ. ಕಮಲಾ ಹ್ಯಾರಿಸ್ ಮೂಲತಃ ಭಾರತದವರಾಗಿದ್ದು, ಈಗಾಗಲೇ ಅಮೆರಿಕದ ಉಪಾಧ್ಯಕ್ಷೆ ಪಟ್ಟವನ್ನ ಅಲಂಕರಿಸಿದ್ದಾರೆ. ಆದ್ರೆ ಈ ಬಾರಿಯ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದು, ಗೆದ್ದುಬರಲಿ ಎಂದು ಈ ಪೂಜೆ ನೆರವೇರಿಸಲಾಗಿದೆ.

ಈ ಬಾರಿ ಅಮೆರಿಕ ಅಧ್ಯಕ್ಷೀಯ ಚುನಾವಣೆ ತೀವ್ರ ಜಟಾಪಟಿಯಿಂದ ಕೂಡಿರಲಿದ್ದು, ಡೊನಾಲ್ಡ್ ಟ್ರಂಪ್ ಮತ್ತು ಕಮಲಾ ಹ್ಯಾರಿಸ್ ನಡುವಿನ ರಾಜಕೀಯ ಯುದ್ಧದ್ದಲಿ ಕಮಲಾ ಹ್ಯಾರಿಸ್ ಗೆದ್ದು ಅಮೆರಿಕಾ ಅಧ್ಯಕ್ಷೆಯಾಗಬೇಕು ಎಂಬುದು ಹಲವು ಭಾರತೀಯರ ಬಯಕೆಯಾಗಿದೆ.



## ಮಹಿಳೆ ಜೋರಾಗಿ ಕುರಾನ್ ಪಠಿಸುವಂತಿಲ್ಲ

**ಕಾಬೂಲ್:** ಶಿಕ್ಷಣ, ಉದ್ಯೋಗ, ಉಡುಗೆ-ತೊಡುಗೆಯೂ ಸೇರಿ ಈಗಾಗಲೇ ಸ್ತ್ರೀಯರ ಬಹುತೇಕ ಸ್ವಾತಂತ್ರ್ಯ ಕಸಿದಿರುವ ಅಫ್ಘಾನಿಸ್ತಾನದ ತಾಲಿಬಾನ್ ಆಡಳಿತವು ಇದೀಗ, ಒಬ್ಬ ಮಹಿಳೆ ಮತ್ತೊಬ್ಬ ಮಹಿಳೆಯ ಎದುರು ಜೋರಾಗಿ ಕುರಾನ್ ಪಠಿಸಬಾರದು. ಸುಶ್ರಾವ್ಯವಾಗಿ ಅಜಾನ್ ಹೇಳಬಾರದು ಎಂದು ನಿಷೇಧ ಹೇರಿದೆ. ದಂತೆ ಖಾತರಿ ಪಡಿಸಿಕೊಳ್ಳಲಾಗುವುದು ಎಂದು ಹೇಳಿಕೊಂಡಿದೆ.?ಈ ಮೂಲಕ ಮಹಿಳೆಯರು ಸಂಗೀತವನ್ನು ಆಸ್ವಾದಿಸ ಹೊಸ ತಾಕೀತಿನ ಬಗ್ಗೆ ಮಾತನಾಡಿದ ತಾಲಿಬಾನ್ ಸಚಿವ ಮೊಹಮ್ಮದ್ ಖಾಲಿದ್ ಹನಾಫಿ ಮಾತನಾಡಿದ್ದು, ''ಇಸ್ಲಾಂನಲ್ಲಿ ಮಹಿಳೆಯರ ಧ್ವನಿಯನ್ನು ''ಅವ್ರಾ' (ಗೌಪ್ಯ) ಎಂದು ಪರಿಗಣಿಸಲಾಗುತ್ತದೆ. ಮಹಿಳೆಯರು ಸಾರ್ವಜನಿಕವಾಗಿ ತಮ್ಮ ಧ್ವನಿ ಎತ್ತರಿಸುವಂತಿಲ್ಲ. ಜತೆಗೆ ತಕಿಬ್ಬರ್ (ಅಲ್ಲಾ ಹು ಅಕ್ಬರ್) ಅಥವಾ ಅಜಾನ್ ಅನ್ನು ಒಬ್ಬ ಮಹಿಳೆ ಮತ್ತೊಬ್ಬ ಮಹಿಳೆ ಮುಂದೆ ಜೋರಾಗಿ ಪಠಿಸಿದರೆ ಸುಶ್ರಾವ್ಯವಾಗಿ ಹಾಡುವುದು ಅಭ್ಯಾಸವಾಗಿಬಿಡುತ್ತದೆ. ಮಹಿಳೆಯರ ಧ್ವನಿಯು ಅವ್ರಾ, ಆದ ಕಾರಣ ಇದು ನಿಷಿದ್ಧ. ಹಾಗಾಗಿ ಒಬ್ಬ ಮಹಿಳೆ ಮತ್ತೊಬ್ಬ ಮಹಿಳೆಯ ಮುಂದೆ ಜೋರಾಗಿ ಕುರಾನ್ ಪಠಿಸುವುದು, ಪ್ರಾರ್ಥಿಸುವು ದನ್ನು ನಿಷೇಧಿಸಲಾಗಿದೆ' ಎಂದಿದ್ದಾರೆ.

## 28 ಲಕಕ್ಕೂ ಹೆಚ್ಚು ದೀಪಗಳಿಂದ ಬೆಳಗಿದೆ ರಾಮಜನ್ಮಭೂಮಿ- 2 ಗಿನ್ನಿಸ್ ವರ್ಲ್ಡ್ ರೆಕಾರ್ಡ್



**ಲಕ್ನೋ:** ಅಯೋಧ್ಯೆಯ ರಾಮಮಂದಿರ ಇಂದು ಸುಮಾರು 28 ಲಕ್ಷಕ್ಕೂ ಹೆಚ್ಚಿನ ದೀಪಗಳಿಂದ ಬೆಳಗಿದೆ. ಆರತಿಯ ಸಮಯದಲ್ಲಿ 1,100 ಕ್ಕೂ ಹೆಚ್ಚು ಜನರು ಸರಯು ಘಾಟ್‌ನಲ್ಲಿ ಒಟ್ಟಾಗಿ ಆರತಿಯನ್ನು ಮಾಡುವ ಮೂಲಕ ಎರಡು ಗಿನ್ನಿಸ್ ವರ್ಲ್ಡ್ ರೆಕಾರ್ಡ್ ದಾಖಲೆಯನ್ನು ಬರೆದಿದ್ದು, ಸಿಎಂ ಯೋಗಿ ಆದಿತ್ಯನಾಥ್ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದಾರೆ. ಅಯೋಧ್ಯೆಯ ರಾಮಮಂದಿರದ ಪ್ರಾಣಪ್ರತಿಷ್ಠೆಯ ನಂತರ ಇದು ಮೊದಲ ದೀಪೋತ್ಸವವಾಗಿದೆ. ಕಾರ್ಯಕ್ರಮದಲ್ಲಿ ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಸಿಎಂ ಯೋಗಿ ಆದಿತ್ಯನಾಥ್ ಸೇರಿದಂತೆ ಗಣ್ಯರು ಭಾಗಿಯಾಗಿದ್ದರು. 500 ವರ್ಷಗಳ ಬಳಿಕ ಅಯೋಧ್ಯೆಯ ರಾಮಲಲ್ಲಾನ ಜನ್ಮಸ್ಥಳದಲ್ಲಿ ನಿರ್ಮಿಸಲಾದ ದೇವಾಲಯವನ್ನು ಸಾವಿರಾರು ದೀಪಗಳಿಂದ ಬೆಳಗಿಸುವ ಮೂಲಕ ಈ ವರ್ಷದ ದೀಪಾವಳಿಯು ಐತಿಹಾಸಿಕವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದರು.

**ಎರಡು ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಬರೆದ ದೀಪೋತ್ಸವ:** ಗಿನ್ನೆಸ್ ವರ್ಲ್ಡ್ ರೆಕಾರ್ಡ್ ತಂಡವು ದೀಪೋತ್ಸವದ ಮೇಲ್ವಿಚಾರಣೆಯನ್ನು ನಡೆಸಿದ್ದು, ಇದೀಗ ಎರಡು ದಾಖಲೆಗಳನ್ನು ಅಯೋಧ್ಯೆ ದೀಪಾವಳಿ ಬರೆದಿದೆ. 1,100 ಜನರ ಸರಯು ಆರತಿ ಮತ್ತು 28 ಲಕ್ಷಕ್ಕೂ ಅಧಿಕ ದೀಪಗಳನ್ನು ಬೆಳಗಿಸುವ ಮೂಲಕ ಇದು ರಾಮಮಂದಿರ ನಿರ್ಮಾಣದ ನಂತರದ ಮೊದಲ ದೀಪೋತ್ಸವವಾಗಿದೆ. ಮಂಗಳವಾರ, ಗಿನ್ನೆಸ್ ವರ್ಲ್ಡ್ ರೆಕಾರ್ಡ್ ಸಲಹೆಗಾರ ನಿಶ್ಚಲ್ ಬರೋಟ್ ನೇತೃತ್ವದ 30 ಸದಸ್ಯರ ತಂಡವು ಡ್ರೋನ್‌ಗಳನ್ನು ಬಳಸಿಕೊಂಡು ಸರಯುವಿನ 55 ಘಾಟ್‌ಗಳಲ್ಲಿ ದಿಯಾಗಳನ್ನು ಎಣಿಸಲು ಪ್ರಾರಂಭಿಸಿದ್ದರು. ರಾಮಾಯಣದ ಘಟನೆಗಳನ್ನು ಚಿತ್ರಿಸುವ ಲೇಸರ್ ಮತ್ತು ಡ್ರೋನ್ ಪ್ರದರ್ಶನ ಕೂಡ ನಡೆಯಿತು. ಈ ಆಚರಣೆಯು ಆರು ದೇಶಗಳನ್ನು ಪ್ರತಿನಿಧಿಸುವ ಮ್ಯಾನ್ಮಾರ್, ನೇಪಾಳ, ಥೈಲ್ಯಾಂಡ್, ಮಲೇಷ್ಯಾ, ಕಾಂಬೋಡಿಯಾ ಮತ್ತು ಇಂಡೋನೇಷ್ಯಾವನ್ನು ಪ್ರತಿನಿಧಿಸುವ ಕಲಾವಿದರಿಂದ ಸಾಂಸ್ಕೃತಿಕ ಪ್ರದರ್ಶನಗಳನ್ನು ಒಳಗೊಂಡಿತ್ತು. ಹಾಗೆಯೇ ಉತ್ತರಾಖಂಡದ ರಾಮ್ ಲೀಲಾ ಪ್ರಸ್ತುತಿ ಕೂಡ ನಡೆಯಿತು. ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಸರಿಸುಮಾರು 10,000 ಭದ್ರತಾ ಸಿಬ್ಬಂದಿಯನ್ನು ನಗರದಾದ್ಯಂತ ನಿಯೋಜಿಸಲಾಗಿದೆ. ವಿಶೇಷ ವ್ಯವಸ್ಥೆಯಲ್ಲಿ 80,000 ದಿಯಾಗಳನ್ನು ಸ್ವಸ್ತಿಕದ ಆಕಾರದಲ್ಲಿ ಘಾಟ್ ನಂ. 10, ಮಂಗಳಕರ ಸಂಕೇತ ಮತ್ತು ಈವೆಂಟ್‌ನ ಕೇಂದ್ರ ಆಕರ್ಷಣೆ. ಭದ್ರತಾ ಕ್ರಮಗಳಲ್ಲಿ ರಾಮ್ ಕಿ ಪೈಡಿಗೆ ಹೋಗುವ 17 ಮಾರ್ಗಗಳನ್ನು ಮುಚ್ಚಲಾಗಿದೆ. ಪಾಸ್ ಹೊಂದಿರುವವರಿಗೆ ಮಾತ್ರ ಪ್ರವೇಶವನ್ನು ಅನುಮತಿಸಲಾಗಿದೆ. ರಾಮಾಯಣದ ರೋಮಾಂಚಕ ಟ್ಯಾಬ್ಲೋ ಹೊಂದಿರುವ ಮೆರವಣಿಗೆಯು ದೇವಾಲಯದ ಪಟ್ಟಣದ ಮೂಲಕ ಸಾಗಿತು. ರಾಮ, ಸೀತೆ, ಲಕ್ಷ್ಮಣ ಮತ್ತು ಹನುಮಾನ್ ಪಾತ್ರಧಾರಿ ಕಲಾವಿದರು ಕುಳಿತಿದ್ದ ರಥವನ್ನು ಯೋಗಿ ಆದಿತ್ಯನಾಥ್ ಅವರು ಆರತಿ ಬೆಳಗುವುದರೊಂದಿಗೆ ಬರಮಾಡಿಕೊಂಡರು.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ದರ್ಶನ್‌ಗೆ ಜಾಮೀನು ಸಿಕ್ಕ ಬೆನ್ನಲ್ಲೇ ವಿಜಯಲಕ್ಷ್ಮಿ ಟೆಂಪಲ್ ರನ್



ಸ್ಯಾಂಡಲ್‌ವುಡ್ ನಟ ದರ್ಶನ್‌ಗೆ ಕೊಲೆ ಪ್ರಕರಣದಲ್ಲಿ 6 ವಾರಗಳ ಕಾಲ ಮಧ್ಯಂತರ ಜಾಮೀನು ಸಿಕ್ಕ ಬೆನ್ನಲ್ಲೇ ಪತ್ನಿ ವಿಜಯಲಕ್ಷ್ಮಿ ಬಳ್ಳಾರಿಯ ದುರ್ಗಮ್ಮ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ.

ದುರ್ಗಮ್ಮ ದೇವಸ್ಥಾನಕ್ಕೆ ಕುಟುಂಬಸ್ಥರ ಜೊತೆ ವಿಜಯಲಕ್ಷ್ಮಿ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಈ ವೇಳೆ, ದರ್ಶನ್ ಪತ್ನಿ ಜೊತೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಫ್ಯಾನ್ಸ್ ಮುಗಿಬಿದ್ದಿದ್ದಾರೆ.

ಅದಷ್ಟೇ ಅಲ್ಲ, ದುರ್ಗಮ್ಮ ದೇವಸ್ಥಾನದಲ್ಲಿ ನಟನ ಫ್ಯಾನ್ಸ್ ನೂರಾರು ತುಪ್ಪದ ದೀಪಗಳನ್ನು ಬೆಳಗಿಸಿ ದೇವಿಗೆ ಪ್ರಾರ್ಥನೆ ಸಲ್ಲಿಸಿದ್ದಾರೆ. ಈ ಮೂಲಕ ದರ್ಶನ್‌ಗೆ ಬೇಲ್ ಸಿಕ್ಕಿದ್ದಕ್ಕೆ ಸಂಭ್ರಮಿಸಿದ್ದಾರೆ.

### ‘ಟಾಕ್ಸಿಕ್’ ಸಿನಿಮಾದಿಂದ ಮರ ಕಡಿದ ಆರೋಪ

# ಮೊದಲ ಬಾರಿಗೆ ಸ್ಪಷ್ಟನೆ ಕೊಟ್ಟ ಎಚ್‌ಎಂಟಿ

ಯಶ್ ನಟನೆಯ ‘ಟಾಕ್ಸಿಕ್’ ಸಿನಿಮಾ ತಂಡ ಬೆಂಗಳೂರಿನ ಹೊರವಲಯದಲ್ಲಿ ಸೆಟ್ ಹಾಕಿತ್ತು. ಸೆಟ್ ಹಾಕಲು ಸಾಕಷ್ಟು ಮರಗಳನ್ನು ಕಡಿಯಲಾಗಿದೆ ಎಂಬ ಆರೋಪ ಬಂದಿದೆ. ಊಒಖಿಗೆ ಸಂಬಂಧಿಸಿದ ಜಾಗದಲ್ಲಿ ಸೆಟ್ ಹಾಕಲಾಗಿತ್ತು ಎನ್ನಲಾಗಿತ್ತು. ಇದಕ್ಕೆ ಸಂಬಂಧಿಸಿ ಎಚ್ ಎಂಟಿ ಕಡೆಯಿಂದ ಸ್ಪಷ್ಟನೆ ಸಿಕ್ಕಿದೆ. ಅವರು ಈ ಬಗ್ಗೆ ಟ್ವೀಟ್ ಮಾಡಿ ಮಾಹಿತಿ ನೀಡಿದ್ದಾರೆ. ಈ ಜಾಗಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದು ಹೇಳಿದ್ದಾರೆ.




ಯಶ್ ನಟನೆಯ ‘ಟಾಕ್ಸಿಕ್’ ತಂಡದವರು ಎಚ್ ಎಂಟಿ ಜಾಗದಲ್ಲಿ ಸೆಟ್ ಹಾಕಿದ್ದರು ಎಂದು ಹೇಳಲಾಗಿತ್ತು. ಆದರೆ, ಇದು ತಮ್ಮ ಜಾಗ ಅಲ್ಲ ಎಂದು ಎಚ್ ಎಂಟಿ ಹೇಳಿದೆ. ‘ಯಶ್ ಅಭಿನಯದ ‘ಟಾಕ್ಸಿಕ್’ ಚಿತ್ರದ ಶೂಟಿಂಗ್ ಗಾಗಿ ಮರ ಕಡಿಯಲಾಗಿದೆ ಎಂದು ಹೇಳಲಾದ ಜಾಗವು ಕೆನರಾ ಬ್ಯಾಂಕ್ ಒಡೆತನದಲ್ಲಿದೆ’ ಎಂದು ಎಚ್ ಎಂಟಿ ಹೇಳಿದೆ.

ಮುಂದುವರಿದು, ‘ಯಾವುದೇ ಸಿನಿಮಾ ತಂಡದವರಿಗೆ ಕೆನರಾ ಬ್ಯಾಂಕ್ ಆಸ್ತಿಯನ್ನು ಬಳಕೆ ಕೊಟ್ಟರೆ ಅದಕ್ಕೂ ಎಚ್ ಎಂಟಿಗೂ ಸಂಬಂಧ ಇಲ್ಲ. ಈ ಪ್ರದೇಶದಲ್ಲಿರುವ ಎಚ್ ಎಂಟಿ ಮಾಲೀಕತ್ವದ ಭೂಮಿಯಲ್ಲಿ ಯಾವುದೇ ಮರಗಳನ್ನು ಕತ್ತರಿಸಲಾಗಿಲ್ಲ’ ಎಂದಿದ್ದಾರೆ ಅವರು.

ಈ ಮೊದಲು ಮಾತನಾಡಿದ್ದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ‘ಹೆಚ್ ಎಂಟಿ ತನ್ನ ವಶದಲ್ಲಿದ್ದ ಜಮೀನನ್ನು ಮಾರಾಟ ಮಾಡಿದೆ. ಮರ, ಗಿಡ ಎಲ್ಲಾ ಕಡಿದು ಸಿನಿಮಾ ಚಿತ್ರೀಕರಣಕ್ಕೆ ಬಾಡಿಗೆ ಕೊಟ್ಟು, ದುಡ್ಡು ಮಾಡ್ತಿದ್ದಾರೆ. ಎಲ್ಲಾ ರೀತಿಯ ಕಾನೂನು ಉಲ್ಲಂಘನೆ ಮಾಡಿದ್ದಾರೆ. ಅವರಿಗೆ ಯಾವುದೇ ಅಧಿಕಾರ ಇಲ್ಲ’ ಎಂದು ಈಶ್ವರ ಖಂಡ್ರೆ ಅವರು ಹೇಳಿದ್ದರು.

ಯಶ್ ನಟನೆಯ ‘ಟಾಕ್ಸಿಕ್’ ಸಿನಿಮಾ ದೊಡ್ಡ ಬಜೆಟ್ ನಲ್ಲಿ ರೆಡಿ ಆಗುತ್ತಿದೆ. ಈಗಾಗಲೇ ಈ ಭಾಗದಲ್ಲಿ ಒಂದು ತಿಂಗಳ ಶೂಟಿಂಗ್ ನಡೆದಿದೆ. ಈ ಸಿನಿಮಾನ 2025ರ ಏಪ್ರಿಲ್ ನಲ್ಲಿ ರಿಲೀಸ್ ಮಾಡಲು ಸಾಧ್ಯವಿಲ್ಲ ಎಂದು ಯಶ್ ಅವರು ಇತ್ತೀಚಿಗಿನ ಸಂದರ್ಶನದಲ್ಲಿ ಹೇಳಿದ್ದರು.



# ಜೈ ಹನುಮಾನ್ ಫಸ್ಟ್ ಲುಕ್




ನಿರ್ದೇಶಕ ಪ್ರಶಾಂತ್ ವರ್ಮಾ ಪೌರಾಣಿಕ ಕಥೆಗಳೊಂದಿಗೆ ಸಮಕಾಲೀನ ಕಥೆಗಳ ಅದ್ಭುತ ಮಿಶ್ರಣಕ್ಕಾಗಿ ಬಹಳಷ್ಟು ಪ್ರಸಿದ್ಧಮ ಪಡೆದಿದ್ದಾರೆ. ಕಾಂತಾರ ಚಿತ್ರದ ಮೂಲಕ ರಿಷಬ್ ಶೆಟ್ಟಿ ರಾಷ್ಟ್ರವ್ಯಾಪಿ ಮೆಚ್ಚುಗೆ ಗಳಿಸಿದ್ದಾರೆ. ಈಗ ಅವರು ಕಾಂತಾರ ಸೀಕ್ವೆಲ್‌ನಲ್ಲಿ ಬ್ಯುಸಿಯಾಗಿದ್ದಾರೆ. ಆದರೆ ಜೈ ಹನುಮಾನ್ ಚಿತ್ರದಲ್ಲಿ ರಿಷಬ್ ಶೆಟ್ಟಿ ನಟಿಸುತ್ತಿರುವುದು ಅವರಿಗೆ ಮನಸಿಗೆ ಮುದನೀಡುವ ಆಫರ್ ಎಂದೇ ಹೇಳಬಹುದು. ಜೈ ಹನುಮಾನ್ ಚಿತ್ರ ಫಸ್ಟ್ ಲುಕ್ ದೀಪಾವಳಿ ಹಬ್ಬದ ಸಮಯದಲ್ಲಿ ಬಿಡುಗಡೆ ಮಾಡಿದೆ. ರಿಷಬ್ ಶೆಟ್ಟಿ ಹನುಮಾನ್ ಆಗಿ ಗೂಸ್ ಬಂಪ್ಸ್ ನೀಡಿದ್ದಾರೆ. ಪೋಸ್ಟರ್‌ನಲ್ಲಿ, ರಿಷಬ್ ಶೆಟ್ಟಿ ಹನುಮಾನ್ ಆಗಿ ಶಕ್ತಿಯುತವಾದ ಭಂಗಿಯಲ್ಲಿ ಕಾಣಿಸಿಕೊಂಡಿದ್ದು, ಭಕ್ತಿಯಿಂದ ಭಗವಾನ್ ರಾಮನ ವಿಗ್ರಹವನ್ನು ಕೈಯಲ್ಲಿ ಹಿಡಿದುಕೊಂಡು ಕಾಲಿನ ಮೇಲೆ ಕುಳಿತಿದ್ದಾರೆ.



ಈ ಬೆರಗುಗೊಳಿಸುವ ಪೋಸ್ಟರ್ ರಿಷಭ್ ಅವರ ದೈಹಿಕತೆಯನ್ನು ಎತ್ತಿ ತೋರಿಸುತ್ತದೆ ಆದರೆ ಭಗವಾನ್ ಹನುಮಂತನ ಆಳವಾದ ಭಕ್ತಿ ಮತ್ತು ಶಕ್ತಿಯನ್ನು ಪ್ರಸ್ತುತಪಡಿಸುತ್ತದೆ. ಪಾತ್ರದ ಚಿತ್ರಣ ಪೌರಾಣಿಕ ವೈಶಿಷ್ಟ್ಯಗಳಿಗೆ ಪೂರಕವಾಗಿದೆ ಎಂದು ತೋರುತ್ತದೆ ಮತ್ತು ಅಭಿಮಾನಿಗಳು ಈ ಅಪ್ರತಿಮ ಪಾತ್ರವನ್ನು ತೆರೆಯ ಮೇಲೆ ಹೇಗೆ ಜೀವ ತುಂಬುತ್ತಾರೆ ಎಂಬುದನ್ನು ನೋಡಲು ಬಹಳ ಕಾತುರರಾಗಿದ್ದಾರೆ. ಪ್ರಶಾಂತ್ ವರ್ಮಾ ಇನ್ನು ದೊಡ್ಡ ಕಥೆಯನ್ನು ಅನಾವರಣಗೊಳಿಸಲು ಸಿದ್ಧರಾಗಿದ್ದಾರೆ.

ಹನುಮಂತನ ಮೌನ ಶರಣಾಗತಿಯಲ್ಲ, ಉದ್ದೇಶಕ್ಕಾಗಿ ಕಾಯುವುದು. ಜೈ ಹನುಮಾನ್ ಎಂಬುದು ಅಚಲ ಭಕ್ತಿಗೆ ಗೌರವವಾಗಿದೆ, ಎಲ್ಲಾ ವಿರೋಧಾಭಾಸಗಳನ್ನು ವಿರೋಧಿಸುವ ಪ್ರತಿಜ್ಞೆಯ ಶಕ್ತಿ. ಅಮರ ಚೇತನವನ್ನು ಆಚರಿಸುವ ಭವ್ಯವಾದ ಸಿನಿಮಾ ಪಯಣವನ್ನು ಅನುಭವಿಸಲು ಸಿದ್ಧರಾಗಿ ಎಂದು ಚಿತ್ರತಂಡ ಹೇಳಿಕೊಂಡಿದೆ. ಜೈ ಹನುಮಾನ್ ಪ್ರಶಾಂತ್ ವರ್ಮಾ ಸಿನೆಮ್ಯಾಟಿಕ್ ಯೂನಿವರ್ಸ್‌ನ ಭಾಗವಾಗಿದೆ. ನವೀನ್ ಯೆರ್ನೇನಿ ಮತ್ತು ವೈ ರವಿಶಂಕರ್ ಈ ಚಿತ್ರವನ್ನು ಬೃಹತ್ ಬಜೆಟ್ ಮತ್ತು ಉನ್ನತ ತಾಂತ್ರಿಕ ಗುಣಮಟ್ಟದೊಂದಿಗೆ ನಿರ್ಮಾಣ ಮಾಡುತ್ತಿದ್ದಾರೆ.

ಹನುಮಂತನ ಮೊದಲ ಭಾಗವು ತೇಜ ಸಜ್ಜನ ಪಾತ್ರವಾಗಿರುತ್ತದೆ. ಯಾವುದೇ ನಿರೀಕ್ಷೆಯಿಲ್ಲದೆ ಬಿಡುಗಡೆಯಾದ ಚಿತ್ರವು ಭಾರತದಲ್ಲಿ 400 ಕೋಟಿ ಕಲೆಕ್ಷನ್ ಮಾಡಿದೆ. ಈ ಬಾರಿ ಚಿತ್ರವನ್ನ ಅದ್ದೂರಿ ಬಜೆಟ್‌ನಲ್ಲಿ ನಿರ್ಮಿಸಲು ಮೈತ್ರಿ ಮೂವೀಸ್ ಕಂಪನಿ ಮತ್ತು ಪ್ರಶಾಂತ್ ವರ್ಮಾ ಭರ್ಜರಿ ತಯಾರಿ ನಡೆಸುತ್ತಿದ್ದಾರೆ. ಇದಲ್ಲದೆ, ಹನುಮಾನ್ ಪಾತ್ರದಲ್ಲಿ ರಿಷಬ್ ಶೆಟ್ಟಿಯಂತಹ ಪ್ಯಾನ್ ಇಂಡಿಯಾ ಸ್ಟಾರ್ ಇದ್ದು, ಚಿತ್ರ 1000 ಕೋಟಿ ಮಾಡುವ ನಿರೀಕ್ಷೆಯಿದೆ.

### ಇಂದು ಐಪಿಎಲ್ ರೀಟೆನ್ಶನ್ ಪಟ್ಟಿ ರಿಲೀಸ್

# ಕ್ಯಾಪ್ಟನ್‌ಗಳನ್ನೇ ಹೊರದಬ್ಬುವ ಸಾಧ್ಯತೆ!

ಇಡೀ ಭಾರತದಲ್ಲಿ ಮಾತ್ರವಲ್ಲದೇ ವಿಶ್ವದ ಕ್ರಿಕೆಟ್ ಅಭಿಮಾನಿಗಳ ಚಿತ್ತ ಈಗ ಬಿಸಿಸಿಐನತ್ತ ನೆಟ್ಟಿದೆ. ಐಪಿಎಲ್‌ನ ಎಲ್ಲಾ ಫ್ರಾಂಚೈಸಿಗಳು ಇಂದು ಉಳಿಸಿಕೊಳ್ಳಬಹುದಾದ ಆಟಗಾರರ ಪಟ್ಟಿ ಬಿಡುಗಡೆ ಮಾಡಲು ಇಂದು (ಅ.31) ಕೊನೆಯ ದಿನವಾಗಿದೆ.

ತಾವು ಉಳಿಸಿಕೊಂಡ ಹಾಗೂ ತಾವು ಕೈ ಬಿಟ್ಟ ಆಟಗಾರರ ಪಟ್ಟಿಯನ್ನು ಐಪಿಎಲ್‌ನ 10 ತಂಡಗಳ ಮಾಲೀಕರು ಸಂಜೆ 4:30 ರಿಂದ 5:30 ಗಂಟೆ ಒಳಗೆ ಪ್ರಕಟಿಸಲಿದ್ದಾರೆ. ಜಿಯೋ ಸಿನಿಮಾದಲ್ಲಿ ನೇರ ಪ್ರಸಾರ ಕಾರ್ಯಕ್ರಮ ನಡೆಯಲಿದೆ. ಈ ಬಾರಿ ಬಿಸಿಸಿಐ 6 ಆಟಗಾರರನ್ನು ಮಾತ್ರ ಉಳಿಸಿಕೊಳ್ಳಲು ಅವಕಾಶ ನೀಡಿದ್ದು, ರೀಟೆನ್ಶನ್ ಪಾಲಿಸಿ ಕೆಲವು ತಂಡಗಳಿಗೆ ಕಬ್ಬಿಣದ ಕಡಲೆ ಆಗಿದೆ. ತಂಡದಲ್ಲಿ ಬಹುತೇಕ ಸ್ಟಾರ್ ಆಟಗಾರರು ಇದ್ದು ಕೇವಲ ಆರು ಜನರನ್ನು ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದೆ.

**ಆಟಗಾರರ ಆಯ್ಕೆ ಹೇಗಿರಲಿದೆ?:** ಇನ್ನು ತಂಡದಲ್ಲಿ ಉಳಿಸಿಕೊಳ್ಳುವ ಆಟಗಾರರ ಬಗ್ಗೆ ಈಗಾಗಲೇ ಮಾರ್ಗ ಸೂಚಿಯನ್ನು ಬಿಡುಗಡೆ ಮಾಡಿದೆ. ಅಂದರೆ ಆರು ಜನರನ್ನು ಉಳಿಸಿಕೊಳ್ಳುವ ತಂಡದಲ್ಲಿ ಗರಿಷ್ಠ ಇಬ್ಬರು ವಿದೇಶಿ ಆಟಗಾರನಿಗೆ ಉಳಿಸಿಕೊಳ್ಳುವ ಅವಕಾಶ ಇದ್ದು, ಇಬ್ಬರು ಅನ್ ಕ್ಯಾಪ್ಡ್ ಪ್ಲೇಯರ್‌ಗಳನ್ನು ತಂಡ ಉಳಿಸಿಕೊಳ್ಳಬಹುದು. ಅಲ್ಲದೇ ಮಾಲೀಕರು ರೈಟ್ ಟು ಮ್ಯಾಚ್ ಕಾರ್ಡ್ ಅವಕಾಶದ ಲಾಭವನ್ನು ಸಹ ಐಪಿಎಲ್ ಹರಾಜಿನಲ್ಲಿ ಪಡೆಯಬಹುದು. ಕೇವಲ ಒಂದು ಕಾರ್ಡ್ ಬಳಕೆಗೆ ಮಾತ್ರ ಅವಕಾಶ ನೀಡಲಾಗಿದೆ.




**ಒಬ್ಬ ಪ್ಲೇಯರ್‌ಗೆ ಎಷ್ಟು ಹಣ?:** ಬಿಸಿಸಿಐ ಆಟಗಾರರಿಗೆ ಎಷ್ಟು ಹಣವನ್ನು ನೀಡಬೇಕು ಎಂಬುದನ್ನು ಸಹ ಸ್ಪಷ್ಟವಾಗಿದೆ ತಿಳಿಸಿದೆ. ಮೊದಲ ಮತ್ತು 4ನೇ ಆಯ್ಕೆಯ ಆಟಗಾರನಿಗೆ ತಲಾ 18 ಕೋಟಿ ರೂ. ನೀಡಬಹುದಾಗಿದೆ. 2 ಮತ್ತು 5ನೇ ಆಯ್ಕೆಯ ಆಟಗಾರನಿಗೆ ತಲಾ 14 ಕೋಟಿ ರೂ. ಹಾಗೂ 3ನೇ ಆಯ್ಕೆಯ ಆಟಗಾರನಿಗೆ 11 ಕೋಟಿ ರೂ. ನೀಡಿ ತಂಡದಲ್ಲಿ ಉಳಿಸಿಕೊಳ್ಳಬಹುದಾಗಿದೆ. ಅಲ್ಲದೇ ಅನ್ ಕ್ಯಾಪ್ಡ್ ಆಟಗಾರರಿಗೆ 4 ಕೋಟಿ ನೀಡಿ ತಂಡದಲ್ಲಿ ಉಳಿಸಿಕೊಳ್ಳಬಹುದಾಗಿದೆ.

**ಪರ್ಸ್ ಸೈಜ್ ಎಷ್ಟು?:** ಈ ಬಾರಿ ಬಿಸಿಸಿಐ ಪರ್ಸ್ ಮೊತ್ತ ದೊಡ್ಡದು ಮಾರಿದೆ. ಈ ಬಾರಿ ಮಾಲೀಕರು 120 ಕೋಟಿ ರೂ.ಗಳನ್ನ ತಮ್ಮ ಪರ್ಸ್‌ನಲ್ಲಿ ಹೊಂದಿರುತ್ತಾರೆ. ಅಲ್ಲದೇ ಈ ಹಣದ ಮೂಲಕವೇ ಐಪಿಎಲ್ ಮೆಗಾ ಹರಾಜಿನಲ್ಲಿ ಆಟಗಾರರಿಗೆ ಗಾಳ ಹಾಕಲಾಗುತ್ತದೆ. ಇನ್ನು ಒಂದು ತಂಡ ಗರಿಷ್ಠ 25 ಆಟಗಾರರನ್ನು ಹೊಂದಲು ಅವಕಾಶ ನೀಡಲಾಗಿದೆ. ರಿಟೇನ್ ಆಟಗಾರರಿಗೆ 75 ಕೋಟಿ ರೂ. ಬಳಕೆ ಮಾಡಲು ನಿಯಮ ವಿಧಿಸಿದೆ.

# ಆರ್‌ಸಿಬಿ ಕ್ಯಾಪ್ಟನ್ ಆಗಿ ವಿರಾಟ್ ಕೊಹ್ಲಿ ರೀ ಎಂಟ್ರಿ?

**ಮುಂಬೈ:** ಐಪಿಎಲ್ 2025ರ ಋತುವಿನಲ್ಲಿ ವಿರಾಟ್ ಕೊಹ್ಲಿ ಆರ್‌ಸಿಬಿಗೆ ಕ್ಯಾಪ್ಟನ್ ಆಗಿ ಮರಳಲು ಸಜ್ಜಾಗಿದ್ದಾರೆಂದು ವರದಿಯಾಗಿದೆ.

ಕೊಹ್ಲಿ ಮತ್ತು ತಂಡದ ಮ್ಯಾನೇಜ್‌ಮೆಂಟ್ ನಾಯಕತ್ವದ ಬದಲಾವಣೆಯ ಬಗ್ಗೆ ಈಗಾಗಲೇ ಚರ್ಚಿಸಿದ್ದಾರೆ. ನಾಯಕತ್ವದ ಸ್ಥಾನ ಅಲಂಕರಿಸಲು ಕೊಹ್ಲಿ ಉತ್ಸುಕರಾಗಿದ್ದಾರೆ ಎಂದು ತಿಳಿದುಬಂದಿದೆ.

ಈಗ 40ರ ಹರೆಯದ ಮಾಜಿ ನಾಯಕ ಫಾಫ್ ಡು ಪ್ಲೆಸಿಸ್ ಅವರು 2022ರಿಂದ 2024ರವರೆಗೆ ಆರ್‌ಸಿಬಿಯನ್ನು ಮುನ್ನಡೆಸಿದರು. ಆದರೆ ಅವರ ವಯಸ್ಸಿನ ಕಾರಣದಿಂದ ಅವರು ಮುಂದುವರಿಯುವ ಸಾಧ್ಯತೆ ಕಡಿಮೆ. ಫ್ರಾಂಚೈಸಿ ಈಗ ಕೊಹ್ಲಿಯನ್ನು ಮತ್ತೆ ನಾಯಕನನ್ನಾಗಿ ಮಾಡಲು ಸಿದ್ಧತೆ ನಡೆಸಿದೆ ಎನ್ನಲಾಗಿದೆ.

ಇದುವರೆಗೂ ಐಪಿಎಲ್ ಪ್ರಶಸ್ತಿ ಗೆಲ್ಲದ ಆರ್ ಸಿಬಿ ಮುಂಬರುವ ಮೆಗಾ ಹರಾಜಿನ ಮುನ್ನ ಕೊಹ್ಲಿ ನಾಯಕತ್ವವನ್ನು ತನ್ನ ಕಾರ್ಯತಂತ್ರದ ಕೇಂದ್ರವನ್ನಾಗಿ ಮಾಡಿದೆ. ಕೊಹ್ಲಿ ಈ ಹಿಂದೆ 2013 ರಿಂದ 2021 ರವರೆಗೆ ಆರ್‌ಸಿಬಿ ನಾಯಕತ್ವ ವಹಿಸಿದ್ದರು. ತಂಡವನ್ನು ನಾಲ್ಕು ಬಾರಿ ಪ್ಲೇ ಆಫ್‌ಗೆ ತಲುಪಿಸುವಲ್ಲಿ ಶ್ರಮಿಸಿದ್ದರು.




# ಚಿತ್ರರಂಗದ ಇಬ್ಬರು, ರಂಗಭೂಮಿಯ ಐವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ

**ಬೆಂಗಳೂರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ 2024ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಘೋಷಣೆ ಮಾಡಿದೆ. ಚಿತ್ರರಂಗ, ಸಾಹಿತ್ಯ, ಸಮಾಜ ಸೇವೆ, ಕೃಷಿ, ವಿಜ್ಞಾನ, ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಕನ್ನಡಿಗರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಘೋಷಣೆ ಮಾಡಲಾಗಿದೆ. ಈ ಬಾರಿ ಬರೋಬ್ಬರಿ 69 ಮಂದಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗಿದೆ. ಇದರಲ್ಲಿ ಇಬ್ಬರು ಚಲನಚಿತ್ರ ರಂಗದ ಸಾಧಕರನ್ನು ಸಹ ಗುರುತಿಸಲಾಗಿದೆ.



ಆಂಧ್ರ ಪ್ರದೇಶ ಮೂಲದವರಾದರೂ ಕನ್ನಡದ ನೂರಾರು ಸಿನಿಮಾಗಳಲ್ಲಿ ಹಾಗೂ ಕೆಲ ಧಾರಾವಾಹಿಗಳಲ್ಲಿ ನಟಿಸಿ ಕನ್ನಡಿಗರಿಗೆ ಬಹಳ ಹತ್ತಿರವಾಗಿರುವ ನಟಿ ಹೇಮಾ ಚೌಧರಿ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತಿದೆ. ಹೇಮಾ ಚೌಧರಿ 1976 ರಿಂದಲೂ ಕನ್ನಡ ಸಿನಿಮಾಗಳಲ್ಲಿ ನಟಿಸುತ್ತಲೇ ಬಂದಿದ್ದಾರೆ. ನಾಯಕಿಯಾಗಿ ಪರಿಚಿತವಾದ ಹೇಮಾ ಚೌಧರಿ ಕನ್ನಡದ ಹಲವು ಸ್ಟಾರ್ ನಟರೊಟ್ಟಿಗೆ ನಾಯಕಿಯಾಗಿ ನಟಿಸಿದ್ದಾರೆ. ಆ ನಂತರ ಸಹೋದರಿಯಾಗಿ, ತಾಯಿಯಾಗಿ, ಅಜ್ಜಿಯ ಪಾತ್ರಗಳಲ್ಲಿಯೂ ನಟಿಸಿದ್ದಾರೆ. ಕನ್ನಡದ ಎರಡು ಧಾರಾವಾಹಿಗಳಲ್ಲಿಯೂ ಸಹ ಹೇಮಾ ಚೌಧರಿ ನಟಿಸಿದ್ದಾರೆ. ಹೇಮಾ ಚೌಧರಿ ಮೂಲತಃ ತೆಲುಗಿನವರಾದರೂ ಅತಿ ಹೆಚ್ಚು ನಟಿಸಿರುವುದು ಕನ್ನಡ ಸಿನಿಮಾಗಳಲ್ಲಿಯೇ. ಐದು ದಶಕದಿಂದಲೂ ಕನ್ನಡ ಚಿತ್ರರಂಗದೊಂದಿಗೆ ನಂಟು ಹೊಂದಿರುವ ಹೇಮಾ ಚೌಧರಿ ಕನ್ನಡದ ನಟಿಯೇ ಆಗಿಬಿಟ್ಟಿದ್ದಾರೆ.

ಬರಹಗಾರ ಎಂಎಸ್ ನರಸಿಂಹಮೂರ್ತಿ ಅವರಿಗೆ ಚಲನಚಿತ್ರ/ಕಿರುತೆರೆ ವಿಭಾಗದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಖ್ಯಾತ ಬರಹಗಾರರು, ಸಾಹಿತಿಗಳೂ ಆಗಿರುವ ಎಂಎಸ್ ನರಸಿಂಹಮೂರ್ತಿಯವರು ಹಲವಾರು ಸಿನಿಮಾ ಹಾಗೂ ಧಾರಾವಾಹಿಗಳಿಗೆ ಸಾಹಿತ್ಯ, ಸಂಭಾಷಣೆ, ಚಿತ್ರಕತೆಯನ್ನು ಒದಗಿಸಿದ್ದಾರೆ. ಈಗಲೂ ಸಹ ಕಿರುತೆರೆಯಲ್ಲಿ ನಗೆ ಭಾಷಣ, ನಗೆ ಚರ್ಚೆಗಳನ್ನು ಆಯೋಜಿಸುತ್ತಾರೆ. ಕಿರುತೆರೆ ಹಾಗೂ ಚಲನಚಿತ್ರ ರಂಗಕ್ಕೆ ಅವರ ಅದಮ್ಯ ಕೊಡುಗೆ ಗುರುತಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಲಾಗಿದೆ.

ರಂಗಭೂಮಿ ಕ್ಷೇತ್ರದ ಆರು ಸಾಧಕರನ್ನು ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸರಸ್ವತಿ ಜುಲೈಕಾ ಬೇಗಂ, ಓಬಳೇಶ್ ಎಚ್‌ಬಿ, ಭಾಗ್ಯಾ ರವಿ, ಡಿ ರಾಮು, ಎಚ್ ಜನಾರ್ಧನ, ಹನುಮಾನ ದಾಸ ಪವಾರ ಅವರುಗಳನ್ನು ಆರಿಸಲಾಗಿದೆ. ಇನ್ನು ಸಂಗೀತ ಕ್ಷೇತ್ರದಿಂದ ರಾಜಗೋಪಾಲ್ ಮತ್ತು ಸದಾಶಿವ, ನೃತ್ಯ ಕ್ಷೇತ್ರದಿಂದ ವಿದುಷಿ ಲಲಿತಾ ರಾವ್, ಯಕ್ಷಗಾನ ವಿಭಾಗದಿಂದ ಸೀತಾರಾಮ ತೋಳ್ಪಾಡಿ ಮತ್ತು ಕೇಶವ್ ಹೆಗಡೆ ಅವರನ್ನು ಆರಿಸಲಾಗಿದೆ. ಬಯಲಾಟ ಕ್ಷೇತ್ರದಿಂದ ಸಿದ್ದಪ್ಪ ಕರಿಯಪ್ಪ ಕುರಿ, ನಾರಾಯಣಪ್ಪ ಶಿಳ್ಳೆಕ್ಯಾತ ಅವರುಗಳನ್ನು ಆಯ್ಕೆ ಮಾಡಲಾಗಿದೆ.

# ಜಮೀರ್ ಅಹ್ಮದ್ ಎರಡನೇ ಟಿಪ್ಪು, ಔರಂಗಜೇಬ್ ಥರ ಮೆರೆಯುತ್ತಿದ್ದಾರೆ

**ಧಾರವಾಡ:** ಜಮೀರ್ ಅಹ್ಮದ್ ಎರಡನೇ ಟಿಪ್ಪು, ಔರಂಗಜೇಬ್ ಥರ ಮೆರೆಯುತ್ತಿದ್ದಾರೆ. ತಾಕತ್ ಇದ್ದರೆ ರೈತರ ಜಮೀನು ವಕ್ಫ್ ಬೋರ್ಡ್‌ಗೆ ರಿಜಿಸ್ಟರ್ ಮಾಡಲಿ ನೋಡೋಣ. ಇದು ಜಮೀರ್‌ಗೆ ನಮ್ಮ ಸವಾಲು ಎಂದು ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಹೇಳಿದ್ದಾರೆ.

ರೈತರ ಪಹಣಿಯಲ್ಲಿ ವಕ್ಫ್ ಹೆಸರು ವಿಚಾರವಾಗಿ ಧಾರವಾಡದಲ್ಲಿ ರೈತರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಪ್ರಮೋದ್ ಮುತಾಲಿಕ್ ಕೂಡಾ ಭಾಗಿಯಾಗಿದ್ದರು. ಈ ವೇಳೆ ಮಾತನಾಡಿದ ಅವರು, ತಾಕತ್ ಇದ್ದರೆ ರೈತರ ಜಮೀನು ವಕ್ಫ್ ಬೋರ್ಡ್‌ಗೆ ರಿಜಿಸ್ಟರ್ ಮಾಡಲಿ ನೋಡೋಣ. ಇದು ಜಮೀರ್ ಗೆ ನಮ್ಮ ಸವಾಲು. ಮುತವಲ್ಲಿಯಿಂದ ಪತ್ರ ಕೇಳಿದ್ದಾರೆ. ಆತ ಮುಸ್ಲಿಂ ಸಮಾಜ, ಮಸೀದಿಗೆ ಸಂಬಂಧಿಸಿದಾತ. ಈ ಎಲ್ಲದರ ಬಗ್ಗೆ ತನಿಖೆ ಆಗಿ ಕ್ರಮ ಆಗಬೇಕು. ರೈತರಿಗೆ ಮುಕ್ತ ಅವಕಾಶ ಸಿಗಬೇಕು ಎಂದು ತಿಳಿಸಿದರು.



ಈ ವೇಳೆ ಅಧಿಕಾರಿಗಳ ಮೇಲೆ ಕಿಡಿಕಾರಿದ ಅವರು, ರಾಜ್ಯ ಸರ್ಕಾರಕ್ಕೆ ಕೂಡಾ ಎಚ್ಚರಿಕೆ ನೀಡಿದರು. ಇವತ್ತು ತಹಸೀಲ್ದಾರ್ ಕಚೇರಿ ಎದುರು ಪ್ರತಿಭಟನೆ ಮಾಡಿದ್ದೇವೆ. ರೈತ ಸಂಘ, ಭಾರತೀಯ ಕಿಸಾನ್ ಸಂಘ, ದಲಿತ ಸಂಘಟನೆಗಳು ಬೆಂಬಲ ಕೊಟ್ಟಿವೆ. ಹಿಂದೂ ಸಂಘಟನೆಗಳು, ಬಿಜೆಪಿಯ ಮಾಜಿ ಶಾಸಕರು ಭಾಗವಹಿಸಿದ್ದರು. ತಹಸೀಲ್ದಾರ್ ಮಾಡಿದ ತಪ್ಪು ತಿದ್ದುಪಡಿಗೆ ಆಗ್ರಹಿಸಿದ್ದೇವೆ. ರೈತರನ್ನು ನಾಲ್ಕು ವರ್ಷದಿಂದ ಓಡಾಡಿಸಿದ್ದಾರೆ. ತಹಸೀಲ್ದಾರ್ ಕಚೇರಿ–ವಕ್ಫ್ ಬೋರ್ಡ್ ಕಚೇರಿ ಮಧ್ಯೆ ಓಡಾಡಿಸಿದ್ದಾರೆ ಎಂದರು.

ನೆಲದ ಮೇಲೆ ಕುಳಿತು ಪ್ರತಿಭಟಿಸುವವರೆಗೂ ಇವರು ಎಚ್ಚರಗೊಳ್ಳುವುದಿಲ್ಲವಾ? ಯಾರಿಗೆ ಅನ್ಯಾಯವಾಗಿದೆ ಇವರಿಗೆ ಗೊತ್ತಾಗುವುದಿಲ್ಲವಾ? ಎಸಿ, ಡಿಸಿ, ತಹಸೀಲ್ದಾರ್ ಇರೋದು ಏತಕ್ಕೆ ಎಂದ ಅವರು, ಧಾರವಾಡದ ಎಸಿ ರೈತರ ಜೊತೆ ಉದ್ಧಟತನದಿಂದ ಮಾತನಾಡಿದ್ದಾರೆ. ರೈತರ ಬಗ್ಗೆ ಮಾತನಾಡುವಷ್ಟು ಧೈರ್ಯ ಬಂತಾ? ರೈತರನ್ನು ಓಡಾಡಿಸುವಷ್ಟು ಧೈರ್ಯ ಬಂತಾ? ಎಂದು ಕಿಡಿಕಾರಿದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com